ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

12 ಜೂನ್, 2026 ಶುಕ್ರವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 93 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ಆಸ್ಟ್ರೇಲಿಯಾ ಟಿ-20 ತಂಡದಲ್ಲಿ ಭಾರತ ಸಂಜಾತ ನಿಖಿಲ್ ಚೌಧರಿ




ಲಂಬೋದರ 2.0 ಶೂಟಿಂಗ್ ನೋಡಲು ಬಂದ ವಿದೇಶಿಗರು » 2



ಹದಿಹರೆಯದಲ್ಲಿ ಹೆಣ್ಣು ಮಕ್ಕಳು ಎಚ್ಚರಿಕೆಯಿಂದಿರಬೇಕು » 3



ಕಾಂಗ್ರೆಸ್ ಜೊತೆ ಟಿಎಂಸಿ ವಿಲೀನ ವದಂತಿಗೆ ತೆರೆ » 4


# ರಾಜ್ಯದ ಅಭಿವೃದ್ಧಿಗೆ ಪ್ರಧಾನಿಯೊಂದಿಗೆ ಚರ್ಚೆ

## ಮೂಲಸೌಕರ್ಯ, ಹೂಡಿಕೆ, ನೀರಾವರಿ ಯೋಜನೆಗೆ ಡಿ.ಕೆ.ಶಿ. ಕೋರಿಕೆ

• ಪ್ರಜೋದಯ ವರದಿ

**ನವದೆಹಲಿ :** ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಮೊದಲ ಬಾರಿಗೆ ದೆಹಲಿಯಲ್ಲಿ ಗುರುವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿ ರಾಜ್ಯದ ಅಭಿವೃದ್ಧಿಗೆ ಸಹಕಾರ ಕೋರಿದರು.

ಮೂಲಸೌಕರ್ಯ, ಹೂಡಿಕೆ, ನೀರಾವರಿ, ನಾವೀನ್ಯತೆ ಮತ್ತು ಜನರ ಜೀವನದ ಮೇಲೆ ನೇರವಾಗಿ ಪರಿಣಾಮ ಬೀರುವ ಉಪಕ್ರಮಗಳು ಸೇರಿ ಕರ್ನಾಟಕದ ಅಭಿವೃದ್ಧಿ ಆದ್ಯತೆಗಳ ಕುರಿತು ಪ್ರಧಾನಿಯೊಂದಿಗೆ ರಚನಾತ್ಮಕ ಚರ್ಚೆ ನಡೆಸಿದರು. ಕರ್ನಾಟಕವು ಯಾವಾಗಲೂ ಭಾರತದ ಬೆಳವಣಿಗೆಗೆ ಪ್ರಮುಖ ಕೊಡುಗೆ ನೀಡಿದೆ. ಅಭಿವೃದ್ಧಿಯನ್ನು ವೇಗಗೊಳಿಸಲು, ಹೆಚ್ಚಿನ ಅವಕಾಶಗಳನ್ನು ಆಕರ್ಷಿಸಲು ಮತ್ತು ಕರ್ನಾಟಕದ ಜನರ ಆಕಾಂಕ್ಷೆಗಳನ್ನು ಪೂರೈಸಲು ಸಹಕಾರಿ ಒಕ್ಕೂಟ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದೊಂದಿಗೆ ನಿಕಟವಾಗಿ ಕೆಲಸ ಮಾಡಲು ನಾನು ಎದುರು ನೋಡುತ್ತಿದ್ದೇನೆಂದು ಹೇಳಿದ್ದಾರೆ.

ಬೆಂಗಳೂರಿನ ಸಂಚಾರ ದಟ್ಟಣೆ ನಿಯಂತ್ರಣಕ್ಕೆ ಅಗತ್ಯವಿರುವ ಅರ್ಬನ್



ಮೊಬಿಲಿಟಿ ಹಾಗು ರಾಜ್ಯದ ಪ್ರಮುಖ ನೀರಾವರಿ ಯೋಜನೆಗಳಿಗೆ ಕೇಂದ್ರದ ಸಹಕಾರ ಕೋರಲಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ಜಂಟಿ ಸಹಭಾಗಿತ್ವದಲ್ಲಿ ಹೊಸ ಉದ್ಯೋಗಾವಕಾಶಗಳ ಸೃಷ್ಟಿ ಹಾಗು ಗ್ರಾಮೀಣ ಕಲ್ಯಾಣ ಯೋಜನೆಗಳನ್ನು ಜಾರಿಗೆ ತರುವ ಬಗ್ಗೆಯೂ ಚರ್ಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಒಟ್ಟಾರೆಯಾಗಿ ಬಲಿಷ್ಠ ಕರ್ನಾಟಕದ ಮೂಲಕ ಬಲಿಷ್ಠ ಭಾರತವನ್ನು ನಿರ್ಮಿಸುವ ಸಂಕಲ್ಪಕ್ಕೆ ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿದ್ದಾರೆ. ಪ್ರಧಾನಿ ಮೋದಿ ಕೂಡ ರಾಜ್ಯದ ಸರ್ವಾಂಗೀಣ ಪ್ರಗತಿಗೆ ಅಗತ್ಯ ನೆರವು ನೀಡುವ ಭರವಸೆ ನೀಡಿದ್ದಾರೆ ಎನ್ನಲಾಗಿದೆ.

**ನೀತಿ ಆಯೋಗದ ಸಭೆಯಲ್ಲಿ ಭಾಗಿ**

ಪ್ರಧಾನಿ ನರೇಂದ್ರ ಮೋದಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ನೀತಿ ಆಯೋಗದ ಸಭೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಭಾಗಿಯಾಗಿದ್ದರು. ರಾಷ್ಟ್ರಪತಿ ಭವನದ ಸಾಂಸ್ಕೃತಿಕ ಕೇಂದ್ರದಲ್ಲಿ ನಡೆದ ಸಭೆಯಲ್ಲಿ ಮುಖ್ಯಮಂತ್ರಿಗಳು, ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು, ಕೇಂದ್ರ ಸಚಿವರು ಪಾಲ್ಗೊಂಡರು.

### ರಾಜ್ಯ-ಕೇಂದ್ರದ ಸಂಬಂಧ ವೃದ್ಧಿಯಾಗಲಿ : ಮೋದಿ

**ನವದೆಹಲಿ :** ರಾಜ್ಯಗಳ ನಡುವಿನ ಸಂಬಂಧಗಳು ಸಹಕಾರ ಮತ್ತು ಸಂವಾದದ ಆಧಾರದ ಮೇಲೆ ಸಾಗಬೇಕು. ವಿವಿಧ ರಾಜ್ಯಗಳು ತಮ್ಮ ಉತ್ತಮ ಆಲೋಚನೆ ಮತ್ತು ಅನುಭವಗಳನ್ನು ಹಂಚಿಕೊಳ್ಳಲು ನೀತಿ ಆಯೋಗವು ಪರಿಣಾಮಕಾರಿ ವೇದಿಕೆಯಾಗಿ ಕಾರ್ಯ ನಿರ್ವಹಿಸಬಹುದೆಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ನೀತಿ ಆಯೋಗದ ಆಡಳಿತ ಮಂಡಳಿಯ 11ನೇ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಹಕಾರಿ ಫೆಡರಲಿಸಂನ ಮನೋಭಾವದೊಂದಿಗೆ ಕೇಂದ್ರ ಮತ್ತು ರಾಜ್ಯಗಳು ಒಗ್ಗಟ್ಟಿನಿಂದ ಕಾರ್ಯನಿರ್ವಹಿಸುತ್ತಿವೆ. ವಿಕಸಿತ ಭಾರತದ ನಮ್ಮ ಸಾಮೂಹಿಕ ಕನಸನ್ನು ಸಾಕಾರಗೊಳಿಸುವಲ್ಲಿ ಕೇಂದ್ರ ಮತ್ತು ರಾಜ್ಯಗಳ ಜಂಟಿ ಪ್ರಯತ್ನಗಳು ನಿರ್ಣಾಯಕ ಪಾತ್ರ ವಹಿಸಲಿವೆ ಎಂದು ಬಣ್ಣಿಸಿದರು.

ಮಹಿಳೆಯರ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಸುರಕ್ಷತೆ ಮತ್ತು ಸಬಲೀಕರಣಕ್ಕೆ ರಾಜ್ಯಗಳು ಹೆಚ್ಚಿನ ಆದ್ಯತೆ ನೀಡಬೇಕು. ಮಹಿಳೆಯರ ಸಂಪೂರ್ಣ ಸಾಮರ್ಥ್ಯವನ್ನು ಹೊರ ತಂದು ದೇಶದ ಅಭಿವೃದ್ಧಿ ಪಯಣಕ್ಕೆ ಮತ್ತಷ್ಟು ವೇಗ ನೀಡುವುದು ಅಗತ್ಯ. ಯುವ ಜನತೆಗೆ ಗುಣಮಟ್ಟದ ಶಿಕ್ಷಣ, ಮಾರುಕಟ್ಟೆ ಬೇಡಿಕೆಗೆ ಅನುಗುಣವಾದ ಕೌಶಲ್ಯಾಭಿವೃದ್ಧಿ ಹಾಗೂ ಉದ್ಯೋಗಾವಕಾಶಗಳನ್ನು ಒದಗಿಸುವ ಪರಿಸರ ನಿರ್ಮಾಣಕ್ಕೆ ಆದ್ಯತೆ ನೀಡಬೇಕು. ಸಬಲಗೊಂಡ ಯುವಜನತೆಯೇ ವಿಕಸಿತ ಭಾರತದ ಕನಸನ್ನು ನನಸಾಗಿಸುವ ಪ್ರಮುಖ ಶಕ್ತಿಯಾಗಲಿದೆ ಎಂದರು.

# ಸೇವೆಯ ಮನಸ್ಸಿದ್ದರೆ ಅವಕಾಶ ಸ್ವಯಂ ಸೃಷ್ಟಿ

## ಸಂಚಾರಿ ಆಸ್ಪತ್ರೆ ಲೋಕಾರ್ಪಣೆ ಮಾಡಿದ ನಿರ್ಮಲಾನಂದನಾಥ ಶ್ರೀ

• ಪ್ರಜೋದಯ ವರದಿ

**ಹಾಸನ:** ಸೇವೆ ಮಾಡಲು ಶ್ರೀಮಂತಿಕೆಯೇ ಬೇಕಿಲ್ಲ. ನೆರವಾಗುವ ಮನಸ್ಸು, ಇಷ್ಟ ಭಾವನೆ ಹಾಗು ಒಳ್ಳೆಯ ಉದ್ದೇಶವಿದ್ದರೆ ಭಗವಂತನೇ ಸಹಾಯ ಮಾಡಿಸುತ್ತಾನೆ, ಸದುದ್ದೇಶಕ್ಕೆ ದಾರಿಗಳು ಸಾಕಷ್ಟಿವೆ ಎಂದು ಆದಿಚುಂಚನಗಿರಿ ಪೀಠಾಧ್ಯಕ್ಷ ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಹೇಳಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಗುರುವಾರ ಹಳೇಬೀಡು ಪುಷ್ಪಗಿರಿ ಮಹಾಸಂಸ್ಥಾನದ ಉಚಿತ ಸಂಚಾರಿ ಆಸ್ಪತ್ರೆ ಉದ್ಘಾಟನಾ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಅವರು, ಮಹಾಲಕ್ಷ್ಮಿ ಮಂಜಪ್ಪ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಯವರು ಗ್ರಾಮೀಣ ಜನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಉಚಿತ ಸಂಚಾರಿ ಆರೋಗ್ಯ ವಾಹನ ನೀಡಿದ್ದಾರೆ. ಸಾಮಾನ್ಯರು ಸಹ ಸಮಾಜಕ್ಕೆ ಏನಾದರೂ ಕೊಡುಗೆ ನೀಡಬಹುದು. ಅದಕ್ಕೆ ಶ್ರೀಮಂತಿಕೆ ಬೇಕಿಲ್ಲ, ಮನಸ್ಸಿದ್ದರೆ ಅವಕಾಶಗಳು



ಸೃಷ್ಟಿಯಾಗುತ್ತವೆಂದರು.

ಮಕ್ಕಳ ಭಾಷೆಯಲ್ಲಿ ಸಮಾಜ ಮಾತನಾಡುವಂತಾಗಬೇಕು. ಭಾಷೆ ಎಂದರೆ ಕನ್ನಡ, ಇಂಗ್ಲೀಷ್, ಹಿಂದಿಯಲ್ಲ. ಭಾವನೆಗಳು ಒಂದಾಗುವ ಭಾಷೆ ಬೇರೆಯೇ ಇದ್ದು, ಅದು ಒಂದಾಗಬೇಕು. ಹಾಗಾದರೆ ಸದೃಢ ಸಮಾಜ ನಿರ್ಮಾಣ ಸಾಧ್ಯವಾಗುತ್ತದೆ. ಇತರರಿಗೆ ಒಳಿತು ಮಾಡುವ ಗುರಿಯನ್ನು ನಾವು ಹಾಕಿಕೊಳ್ಳಬೇಕು. ಮಾನವ ಕಲ್ಯಾಣಕ್ಕೆ ಉಪಯೋಗವಾಗುವ ಅಭಿಪ್ಸೆ ನಮ್ಮದಾಗಿರಬೇಕು. ಜನರ ಮೊಗದಲ್ಲಿ ಮಾಸಿರುವ ನಗುವನ್ನು ಪುನಃ ತರುವ ಉದ್ದೇಶ ಎಲ್ಲರದ್ದಾಗಿರಬೇಕೆಂದರು.

ಆಲ್ ಕೆಮೆಸ್ಟ್ ಎಂಬ ಕಾದಂಬರಿಯಲ್ಲಿ ಉಲ್ಲೇಖವಾಗಿರುವಂತೆ ಬದುಕಿನಲ್ಲಿ ಏನಾದರೂ ಸಾಧನೆ ಮಾಡಬೇಕೆಂದು ಬಯಸಿದರೆ ತೀಕ್ಷ್ಣತೆಯ ಸ್ಥಿತಿಯನ್ನು ನೋಡಿ ಅಸ್ತಿತ್ವವೇ ಯಾವುದಾದರೂ ರೂಪದಲ್ಲಿ ಸಹಾಯ ಮಾಡುತ್ತದೆಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸ್ವಾಮೀಜಿ ಅವರು ಮಾತನಾಡಿ, ಪುಷ್ಪಗಿರಿ ಮಠವು ಪ್ರತಿ ವರ್ಷ ಯಾವುದಾದರೊಂದು ಕಾರ್ಯಕ್ರಮದ

» ನಾಲ್ಕನೇ ಪುಟದಲ್ಲಿ

# ಡಿ.ಕೆ.ಶಿ. ಸಿಎಂ ಆದರೆಂದು ಒಕ್ಕಲಿಗ ಮತಗಳು ಚದುರುವುದಿಲ್ಲ

## ಜೆಡಿಎಸ್‌ಗೆ ಒಕ್ಕಲಿಗ ಮತಬ್ಯಾಂಕ್ ಇದ್ದೇ ಇದೆ: ಹೆಚ್.ಡಿ.ರೇವಣ್ಣ

• ಪ್ರಜೋದಯ ವರದಿ

**ಮೈಸೂರು:** ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಆದರೆಂದು ಒಕ್ಕಲಿಗ ಮತಗಳು ಜೆಡಿಎಸ್‌ನಿಂದ ಚದುರಿ ಹೋಗುವುದಿಲ್ಲ. ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಒಕ್ಕಲಿಗ ಮತಗಳು ಕಾಂಗ್ರೆಸ್‌ಗೆ ಹೋದವೇ, ಜೆಡಿಎಸ್‌ಗೆ ಒಕ್ಕಲಿಗ ಮತಬ್ಯಾಂಕ್ ಇದ್ದೇ ಇದೆ, ಮುಂದೆಯೂ ಸಮಸ್ಯೆ ಆಗುವುದಿಲ್ಲವೆಂದು ಮಾಜಿ ಸಚಿವ ಹೆಚ್. ಡಿ. ರೇವಣ್ಣ ಅವರು ಹೇಳಿದರು.

ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ದೇವೇಗೌಡರ ರಾಜಕಾರಣ ಮುಗಿದೇ ಹೋಯಿತು ಎಂದು ಹಲವರು ಹೇಳಿದ್ದರು. ಈಗಲೂ ದೇವೇಗೌಡರು ರಾಜಕಾರಣ ಮಾಡುತ್ತಿಲ್ಲವೇ. ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿ ಆಗಿರುವುದಕ್ಕೂ ಒಕ್ಕಲಿಗ ಮತ ಬ್ಯಾಂಕ್‌ಗೂ ಸಂಬಂಧವಿಲ್ಲ. ನಮ್ಮ ಸಮಾಜದ ಒಬ್ಬರು ಮುಖ್ಯಮಂತ್ರಿ ಆಗಿದ್ದಾರೆ,



ಆಗಲಿ ಬಿಡಿ ಎಂದು ಹೇಳಿದರು.

ಸಿದ್ದರಾಮಯ್ಯ ಅವರೇ ಮುಂದುವರಿಯುತ್ತಾರೆ ಎಂದುಕೊಂಡಿದ್ದೆ. ಏನೋ ಒಪ್ಪಂದ ಎಂದು ಬಿಟ್ಟುಕೊಟ್ಟಿದ್ದಾರೆ. ಹೊಸಬರು ಆಡಳಿತ ನಡೆಸಲಿ ಬಿಡಿ. 2028ರ ಚುನಾವಣೆಯ ಬಗ್ಗೆ ಈಗಲೇ ಏಕೆ ಮಾತು ಎಂದರು.

ನಾನಾಗಲಿ, ಹೆಚ್.ಡಿ. ಕುಮಾರಸ್ವಾಮಿ, ದೇವೇಗೌಡರಾಗಲಿ ಆ ಸ್ಥಾನ ಕೊಡಿ ಎಂದು ಬಿಜೆಪಿಯವರನ್ನು ಕೇಳಿರಲಿಲ್ಲ. ಕಾಂಗ್ರೆಸ್‌ನವರು ಈಗ ಚರ್ಚಿಸುತ್ತಿರುವುದು ಅಪ್ರಸ್ತುತ ಎಂದು ಹೇಳಿದರು.

ಶಾಸಕ ಜಿ.ಟಿ.ದೇವೇಗೌಡ ಅವರು ಜೆಡಿಎಸ್ ಬಿಡುವುದಿಲ್ಲ. ಮುಂದಿನ ಚುನಾವಣೆಯಲ್ಲಿ ನಮ್ಮ ಪಕ್ಷದಿಂದಲೇ ಸ್ಪರ್ಧಿಸುತ್ತಾರೆ. ನಾನು, ಹೆಚ್‌ಡಿಕೆ, ಜಿ.ಟಿ.ದೇವೇಗೌಡ ಹಾಗು ಸಾ.ರಾ. ಮಹೇಶ್ ಎಲ್ಲರೂ ಕುಳಿತು ಚರ್ಚಿಸುತ್ತೇವೆ. ಜಿ.ಟಿ.ದೇವೇಗೌಡ ನಮ್ಮನ್ನು ಬಿಟ್ಟು ಎಲ್ಲೂ ಹೋಗುವುದಿಲ್ಲ. ಸಮಸ್ಯೆ ಬಗೆಹರಿಯುತ್ತದೆ. ಖುದ್ದು ಬಂದು ದೇವೇಗೌಡರನ್ನು ಭೇಟಿ ಮಾಡಿದ್ದಾರೆಂದು ಪ್ರತಿಕ್ರಿಯಿಸಿದರು.

### ಪ್ರೀತಮ್ ವಿರುದ್ಧ ವಾಗ್ದಾಳಿ

ಹಾಸನದಲ್ಲಿ ಇರುವವರು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾ ಅಥವಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯಾ ಎನ್ನುವುದು ಗೊತ್ತಿಲ್ಲ. ಅವರು ಏನೆಂಬುದನ್ನು ಬಿಜೆಪಿ ಅಧ್ಯಕ್ಷರೇ ಹೇಳಬೇಕೆಂದು ಮಾಜಿ ಸಚಿವ ಹೆಚ್.ಡಿ.ರೇವಣ್ಣ ಅವರು ಪ್ರೀತಮ್ ಗೌಡ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

# ಮೂರು ತಿಂಗಳ ಯುವ ನಿಧಿ ಹಣ ಬಿಡುಗಡೆ

-ಮಲ್ಲಿಕಾರ್ಜುನ ಕೊಚ್ಚರಗಿ

• ಪ್ರಜೋದಯ ವರದಿ

**ಹಾಸನ:** ನಾಲ್ಕು ತಿಂಗಳಿನಿಂದ ಯುವ ನಿಧಿ ಹಣ ಪಾವತಿಯಾಗದೆ ಆತಂಕಕ್ಕೆ ಸಿಲುಕಿದ್ದ ಅರ್ಜಿದಾರರಿಗೆ ಮೂರು ತಿಂಗಳ ಹಣ ಏಕಕಾಲಕ್ಕೆ ಪಾವತಿಯಾಗಿರುವುದು ಸಂತಸ ತಂದಿದೆ.

ಜನವರಿ ತಿಂಗಳ ಹಣ ಪಡೆದಿದ್ದ ಉದ್ಯೋಗಾಕಾಂಕ್ಷಿಗಳು ಕಳೆದ ನಾಲ್ಕು ತಿಂಗಳಿನಿಂದ ಹಣ ಬಾರದೆ ಯೋಜನೆ ಶಾಶ್ವತವಾಗಿ ಸ್ಥಗಿತಗೊಳ್ಳುವ ಆತಂಕದಲ್ಲಿದ್ದರು. ಆದರೆ, ಜೂನ್ 9 ಹಾಗು 10ರಂದು ಫಲಾನುಭವಿಗಳ ಖಾತೆಗೆ ಹಣ ಸಂದಾಯವಾಗಿದೆ. ಒಟ್ಟು 29,45,85,000 ರೂ. ಬಿಡುಗಡೆಯಾಗಿದೆ. ಫೆಬ್ರವರಿಯಲ್ಲಿ 4820, ಮಾರ್ಚ್ 4440 ಹಾಗು ಏಪ್ರಿಲ್‌ನಲ್ಲಿ 3355 ಫಲಾನುಭವಿಗಳು ಹಣ ಪಡೆದಿದ್ದಾರೆ.

**10,837 ಅರ್ಜಿ ಸಲ್ಲಿಕೆ**

ಪದವಿ ಅಥವಾ ಡಿಪ್ಲೊಮಾ ವ್ಯಾಸಂಗ ಪೂರ್ಣಗೊಳಿಸಿದವರಿಗೆ ಉದ್ಯೋಗ ಸಿಗುವವರೆಗೆ ಅಥವಾ ಸ್ಪರ್ಧಾತ್ಮಕ ಪರೀಕ್ಷೆ ತಯಾರಿಗಾಗಿ ಎರಡು ವರ್ಷಗಳ ಕಾಲ ಸರ್ಕಾರ ಯುವನಿಧಿ ಹೆಸರಿನಡಿ ಹಣ ನೀಡಲಾಗುತ್ತಿದೆ. ಪದವೀಧರರಿಗೆ 3 ಸಾವಿರ ರೂ. ಹಾಗು ಡಿಪ್ಲೊಮಾ, ಐಟಿಐ ಪಾಸಾದವರಿಗೆ ಪ್ರತಿ ತಿಂಗಳು 1,500 ರೂ. ದೊರೆಯುತ್ತಿದೆ. 2022-23ನೇ ಸಾಲಿನಲ್ಲಿ ವ್ಯಾಸಂಗ ಮಾಡಿ ಪದವಿ ಪೂರ್ಣಗೊಳಿಸಿದವರು ಯೋಜನೆಗೆ ಅರ್ಹರಾಗಿದ್ದರು. ಯೋಜನೆ ಆರಂಭದಲ್ಲಿ ಅರ್ಜಿ ಸಲ್ಲಿಸಿ ಫಲಾನುಭವಿಗಳಾಗಿದ್ದವರು ಸವಲತ್ತು ಪಡೆಯಲು ಶುರುವಾಗಿ ಎರಡು ವರ್ಷ ಪೂರ್ಣಗೊಂಡಿದ್ದು, ಅಂತಹವರಿಗೆ ಯುವ ನಿಧಿ ಹಣ ದೊರೆಯುತ್ತಿಲ್ಲ. ಉಳಿದಂತೆ ಸಲ್ಲಿಕೆಯಾಗುವ ಅರ್ಜಿಗಳನ್ನು ಪರಿಶೀಲಿಸಿ ಅಂತಿಮಗೊಳಿಸಲಾಗುತ್ತಿದೆ. ಸದ್ಯ ಈ ಯೋಜನೆಯ ಲಾಭ ಪಡೆಯಲು ಜಿಲ್ಲೆಯ 10,837 ಜನರು ಅರ್ಜಿ ಸಲ್ಲಿಸಿದ್ದಾರೆ. ಫಲಾನುಭವಿಗಳ ಸಂಖ್ಯೆ 3 ರಿಂದ 4 ಸಾವಿರ ಮಾತ್ರ ಇರುತ್ತದೆ. ಉಳಿದ ಅರ್ಜಿಗಳ ಪರಿಶೀಲನೆಯಾದ ಬಳಿಕ ಸ್ವೀಕೃತ ಅಥವಾ ತಿರಸ್ಕೃತವಾಗುತ್ತವೆ. ಯುವ ನಿಧಿಗೆ ಅರ್ಹತೆ ಪಡೆಯಬೇಕೆಂದರೆ ವ್ಯಾಸಂಗ ಮುಗಿದು 180 ದಿನಗಳಾಗಿರಬೇಕು, ಬ್ಯಾಂಕ್ ಖಾತೆಗೆ ಆಧಾರ್ ಸಂಖ್ಯೆ ಜೋಡಣೆ, ಬ್ಯಾಂಕ್ ಪಾಸ್ ಬುಕ್, ವಾಸಸ್ಥಳ ದೃಢೀಕರಣ ಪತ್ರ ಇರಬೇಕು. ಅರ್ಜಿದಾರರು ಉನ್ನತ ವ್ಯಾಸಂಗ ಮಾಡಬಾರದು ಹಾಗು ಉದ್ಯೋಗಿಯೂ ಆಗಿರಬಾರದು. ಎಲ್ಲರೂ ಅರ್ಜಿ ಸಲ್ಲಿಸುವುದರಿಂದ ಅವುಗಳ ಸೂಕ್ಷ್ಮ ಪರಿಶೀಲನೆ ನಡೆಸಿ ಅರ್ಹರ ಆಯ್ಕೆ ಮಾಡಲಾಗುತ್ತದೆ. ಹೀಗಾಗಿ ಫಲಾನುಭವಿಗಳ ಸಂಖ್ಯೆ ಕಡಿಮೆಯಾಗುತ್ತಿದೆ ಎಂದು ಅಧಿಕಾರಿಗಳು ಹೇಳುತ್ತಾರೆ.

**ಪ್ರತಿ ತಿಂಗಳು ಬಿಡುಗಡೆಯಾಗಲಿ**

ಪದವಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಯುವ ನಿಧಿಯ ಲಾಭ ದೊರೆಯುತ್ತದೆಂಬ ಆಸೆಯಿಂದ ಸ್ಪರ್ಧಾತ್ಮಕ ಪರೀಕ್ಷೆಗೆ ಸಿದ್ಧತೆ ಕೈಗೊಂಡಿದ್ದಾರೆ. ಬಡತನ ಕಾರಣದಿಂದ ಕೆಲವರು ವ್ಯಾಸಂಗಕ್ಕಾಗಿ ಮನೆಯಲ್ಲಿ ಹಣ ಕೇಳದೆ ಯುವ ನಿಧಿಯನ್ನೇ ನಂಬಿಕೊಂಡಿದ್ದಾರೆ. ಹಳ್ಳಿಗಳಿಂದ ನಿತ್ಯ ನಗರ ಕೇಂದ್ರದ ಗ್ರಂಥಾಲಯಗಳಿಗೆ ಓದುವುದಕ್ಕಾಗಿಯೇ ಬರುತ್ತಾರೆ. ಪುಸ್ತಕ ಮತ್ತಿತರ ಸಾಮಾಗ್ರಿ ಖರೀದಿಗೆ ಯೋಜನೆಯ ಹಣವೇ ಆಧಾರವಾಗಿರುತ್ತದೆ. ಸರ್ಕಾರ ಹಣವನ್ನು ಬಾಕಿ ಉಳಿಸಿಕೊಳ್ಳದೆ ಪ್ರತಿ ತಿಂಗಳು ಬಿಡುಗಡೆ ಮಾಡಬೇಕೆಂಬ ಆಗ್ರಹ ಕೇಳಿಬಂದಿದೆ.

**ಸ್ವಯಂ ದೃಢೀಕರಣ ಕಡ್ಡಾಯ**

ಯುವನಿಧಿ ಫಲಾನುಭವಿಗಳು ಸೇವಾ ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಿದರೆ ಪ್ರಕ್ರಿಯೆ ಮುಗಿಯುವುದಿಲ್ಲ. ಒಂದು ತಿಂಗಳ ಹಣ ಬಂದ ಬಳಿಕ ಮುಂದಿನ ತಿಂಗಳು ಯೋಜನೆಗೆ ಆಯ್ಕೆಯಾಗಬೇಕೆಂದರೆ ಆ ತಿಂಗಳ 12 ರಿಂದ 25ನೇ ದಿನಾಂಕದೊಳಗೆ ಯಾವುದೇ ಉದ್ಯೋಗ ಮಾಡುತ್ತಿಲ್ಲವೆಂದು ಸ್ವಯಂ ದೃಢೀಕರಣ ಸಲ್ಲಿಸಬೇಕು. ನಿರ್ಲಕ್ಷ್ಯ ವಹಿಸಿದರೆ ಯೋಜನೆಯಿಂದ ಶಾಶ್ವತವಾಗಿ ಹೊರಗುಳಿಯಬೇಕಾಗುತ್ತದೆ.

ಯುವನಿಧಿ

- ಏಕಕಾಲಕ್ಕೆ 29 ಕೋ. ರೂ. ಪಾವತಿ
- ಆತಂಕದಲ್ಲಿದ್ದ ಫಲಾನುಭವಿಗಳು ನಿರಾಳ

> **2026ರ ಜನವರಿ 24 ರಿಂದ ಏಪ್ರಿಲ್ 26 ರವರೆಗೆ 98,934 ಫಲಾನುಭವಿಗಳಿಗೆ 29 ಕೋ.ರೂ. ಸಂದಾಯವಾಗಿದೆ. ಈಗಷ್ಟೇ ಪದವಿ, ಡಿಪ್ಲೊಮಾ ವ್ಯಾಸಂಗ ಮುಗಿಸಿದವರು ಅರ್ಜಿ ಸಲ್ಲಿಸಬಹುದು. ಹಣ ಬಿಡುಗಡೆ ಪ್ರಕ್ರಿಯೆಯಲ್ಲಿ ಸಮಸ್ಯೆ ಇಲ್ಲ.**
>
> -ವಿಜಯಲಕ್ಷ್ಮಿ, ಜಿಲ್ಲಾ ಉದ್ಯೋಗಾಧಿಕಾರಿ

# ರೌಡಿಶೀಟರ್ ಮಂಜೇಶ್ ಹತ್ಯೆ: 10 ಆರೋಪಿಗಳ ಬಂಧನ

## ಐವರು ಶರಣಾಗತಿ, ಐವರ ಬಂಧನ : ಪ್ರಕರಣದ ಕಿಂಗ್‌ಪಿನ್‌ಗೆ ಬಲೆಬೀಸಿದ ಪೊಲೀಸರು

• ಪ್ರಜೋದಯ ವರದಿ

**ಹಾಸನ:** ರೌಡಿಶೀಟರ್ ಮಂಜೇಶ್ ಕುಮಾರ್ ಹತ್ಯೆ ಪ್ರಕರಣ ಸಂಬಂಧ 10 ಮಂದಿ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಕಲಬುರಗಿಯ ಸಾಯಿನಾಥ್, ಮೈಸೂರಿನ ಆಕಾಶ್, ಆರ್.ಆದಿತ್ಯ, ನಂಜನಗೂಡಿನ ಜಯಂತ್, ತುಮಕೂರಿನ ಪುನೀತ್ ಕುಮಾರ್, ಮಾಗಡಿ ರಸ್ತೆಯ ರಾಕೇಶ್, ಬೆಳ್ಳೂರಿನ ಶಶಿಧರ್, ಬೆಂಗಳೂರಿನ ಭರತ್, ಯಲ್ಲಾಲಿಂಗ, ಎಂ.ಜಿ. ವಿಕಾಸ್ ಬಂಧಿತರು.

ನಗರದ ಜಿಲ್ಲಾ ನ್ಯಾಯಾಲಯ ಮುಂಭಾಗ ಸೋಮವಾರ ಮುಂಜಾನೆ ಬೆಂಗಳೂರಿನ ರೌಡಿಶೀಟರ್ ಮಂಜೇಶ್ ಕುಮಾರ್‌ನನ್ನು ಹತ್ಯೆ ಮಾಡಲಾಗಿತ್ತು. ಕೊಲೆಗಾರರ ಬಂಧನಕ್ಕೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭನ್ವಿತಾ ಅವರ ನೇತೃತ್ವದಲ್ಲಿ ಪ್ರತ್ಯೇಕ ತಂಡಗಳನ್ನು ರಚಿಸಲಾಗಿತ್ತು.



ಕಾರ್ಯಾಚರಣೆ ವೇಳೆ ಸಾಯಿನಾಥ್, ಶಶಿಧರ್, ಭರತ್ ಸೇರಿ ಐವರು, ಸಾಮಾಜಿಕ ಜಾಲ ತಾಣಗಳಲ್ಲಿ ವಿಡಿಯೋ ಹರಿಬಿಟ್ಟು ನಂತರ ಬುಧವಾರ ಡಿವೈಎಸ್ಪಿ ಗಂಗಾಧರಪ್ಪ ಅವರ ಮುಂದೆ ಶರಣಾಗಿದ್ದರು.

ಮಂಜೇಶ್ ಕೊಲೆಗೂ ನಮಗೂ ಸಂಬಂಧವಿಲ್ಲ. ಕೊಲೆ ಪ್ರಕರಣದಲ್ಲಿ ನಾವು ಭಾಗಿಯಾಗಿಲ್ಲ. ಅಂದು ನಾವು ಬೆಂಗಳೂರಿನಲ್ಲೇ ಇದ್ದೆವು. ನಂತರ ಕಾರವಾರ ಮೊದಲಾದ ಕಡೆಗಳಿಗೆ ಪ್ರವಾಸ ತೆರಳಿದ್ದೆವು. ಪೊಲೀಸರು ನಮ್ಮ ಮನೆಗಳಿಗೆ ತೆರಳಿ ಪೋಷಕರನ್ನು ವಿಚಾರಣೆ ಮಾಡಿದ್ದಾರೆಂದು ತಿಳಿದುಬಂದಿದೆ. ನಮ್ಮಿಂದ ಬೇರೆಯವರಿಗೆ ತೊಂದರೆ ಆಗುವುದು ಬೇಡವೆಂದು ನಾವೇ ಶರಣಾಗುತ್ತಿದ್ದೇವೆಂದು ಹೇಳಿಕೆ ನೀಡಿದ್ದರು. ನಮಗೇನಾದರೂ ತೊಂದರೆಯಾದರೆ ಹಾಸನ ಡಿವೈಎಸ್ಪಿ ಅವರೇ ಕಾರಣವೆಂದು ವಿಡಿಯೋ ಸಹ ಮಾಡಿದ್ದರು. ತನಿಖೆಯ ದಿಕ್ಕು ತಪ್ಪಿಸಲು ಅಥವಾ ನಿಜವಾದ ಕೊಲೆ ಆರೋಪಿಗಳನ್ನು ರಕ್ಷಿಸಲು ಐವರು ನಾಟಕವಾಡಿದ್ದಾರೆಂದು ಹೇಳಲಾಗುತ್ತಿದೆ.

### ತಲೆ ಮರೆಸಿಕೊಂಡಿರುವ ಪ್ರಮುಖ ಆರೋಪಿ

ಕೊಲೆ ಪ್ರಕರಣದಲ್ಲಿ ಭಾಗಿಯಾಗಿದ್ದ ಐವರು ಆರೋಪಿಗಳು ಶರಣಾಗುವ ಮುನ್ನವೇ ತನಿಖಾ ತಂಡ ಐವರನ್ನು ಬಂಧಿಸಿದ್ದು, ಬಂಧಿತರ ಸಂಖ್ಯೆ ಹತ್ತಕ್ಕೆ ಏರಿದಂತಾಗಿದೆ. ಎಲ್ಲಾ ಆರೋಪಿಗಳನ್ನು ಗುರುವಾರ ನಗರದ ಹಿಮ್ಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿದ ನಂತರ ಸ್ಥಳ ಮಹಜರು ನಡೆಸಲಾಯಿತು. ಬಡಾವಣೆ ಪೊಲೀಸ್ ಠಾಣೆಯಲ್ಲಿ ಆರೋಪಿಗಳನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗಿದೆ. ಆದರೆ, ಪ್ರಕರಣದ ಪ್ರಮುಖ ಆರೋಪಿ ಪರಮೇಶ್ ಎಂಬಾತ ಇನ್ನೂ ಕೂಡ ತಲೆ ಮರೆಸಿಕೊಂಡಿದ್ದು, ಆತನ ಬಂಧನಕ್ಕಾಗಿ ಬಲೆ ಬೀಸಲಾಗಿದೆ.

# ಹಲ್ಲಿ ಬಿದ್ದ ಊಟ ಸೇವಿಸಿ 15 ವಿದ್ಯಾರ್ಥಿನಿಯರು ಅಸ್ವಸ್ಥ

• ಪ್ರಜೋದಯ ವರದಿ

**ಹಾಸನ :** ಹಲ್ಲಿ ಬಿದ್ದಿದ್ದ ಸಾಂಬಾರ್ ಸೇವಿಸಿ 15 ವಿದ್ಯಾರ್ಥಿನಿಯರು ಅಸ್ವಸ್ಥಗೊಂಡು, ಐವರ ಸ್ಥಿತಿ ಗಂಭೀರವಾಗಿರುವ ಘಟನೆ ತಾಲ್ಲೂಕಿನ ಸಾರಾಪುರದಲ್ಲಿರುವ ಕೃಷಿ ವಿಜ್ಞಾನ ಕಾಲೇಜಿನ ವಸತಿ ನಿಲಯದಲ್ಲಿ ನಡೆದಿದೆ.

ಸಮರ್ಪಕವಾಗಿ ಸಿಲಿಂಡರ್ ಪೂರೈಕೆಯಾಗದ ಕಾರಣ ಸೌದೆ ಒಲೆಯಲ್ಲಿ ಅಡುಗೆ ಮಾಡುತ್ತಿದ್ದ ವೇಳೆ ಹಲ್ಲಿ ಸಾಂಬಾರ್ ಪಾತ್ರೆಯಲ್ಲಿ ಬಿದ್ದಿದ್ದು, ಊಟ ಮಾಡುವಾಗ ತಟ್ಟೆಯಲ್ಲಿ ಹಲ್ಲಿ ಸಿಕ್ಕಿದೆ. ತಕ್ಷಣ ವಿದ್ಯಾರ್ಥಿಗಳು ವಾಂತಿ ಮಾಡಿಕೊಂಡು ಅಸ್ವಸ್ಥಗೊಂಡಿದ್ದಾರೆ. ಗ್ಯಾಸ್ ಕೊರತೆಯಿಂದಲೇ ಅತಾಚುರ್ಯ ನಡೆದಿದೆ ಎಂದು ವಿದ್ಯಾರ್ಥಿಗಳು ಆರೋಪಿಸಿದ್ದಾರೆ.

400 ವಿದ್ಯಾರ್ಥಿನಿಯರಿರುವ ಹಾಸ್ಟೆಲ್‌ಗೆ ಅಗತ್ಯಕ್ಕೆ ಅನುಗುಣವಾಗಿ



ಸಿಲಿಂಡರ್‌ಗಳು ಪೂರೈಕೆಯಾಗುತ್ತಿಲ್ಲ. ವಾರಕ್ಕೆ ನಾಲ್ಕರಿಂದ ಆರು ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಅಗತ್ಯವಿದೆ. ಒಂದು ಅಥವಾ ಎರಡು ಸಿಲಿಂಡರ್‌ಗಳನ್ನು ಗ್ಯಾಸ್ ಏಜೆನ್ಸಿಯವರು ನೀಡುತ್ತಿದ್ದಾರೆ. ಅಡುಗೆ ತಯಾರಿಸಲು ಕಮರ್ಷಿಯಲ್ ಸಿಲಿಂಡರ್ ಕೊರತೆ ಇರುವುದರಿಂದ ಹಾಸ್ಟೆಲ್‌ನ ಅಡುಗೆ ಕೋಣೆಯಿಂದ ಹೊರಗೆ ಸೌದೆ ಒಲೆಯಲ್ಲಿ ಅಡುಗೆ ತಯಾರಿಸಲಾಗುತ್ತಿದೆ. ಬುಧವಾರ ರಾತ್ರಿ ಅಡುಗೆ ತಯಾರಿಸುತ್ತಿದ್ದ ವೇಳೆ ಸಾಂಬಾರ್ ಪಾತ್ರೆಗೆ ಹಲ್ಲಿ ಬಿದ್ದಿದೆ. ಊಟ ಮಾಡುತ್ತಿದ್ದ ವೇಳೆ ಸಾಂಬಾರ್‌ನಲ್ಲಿ ಹಲ್ಲಿ ಪತ್ತೆಯಾಗಿದ್ದು ಊಟ ಮಾಡುತ್ತಿದ್ದ ವಿದ್ಯಾರ್ಥಿನಿಯರು ವಾಂತಿ ಮಾಡಿಕೊಂಡು ಅಸ್ವಸ್ಥರಾಗಿದ್ದಾರೆ. 15 ವಿದ್ಯಾರ್ಥಿನಿಯರನ್ನು ಆ್ಯಂಬುಲೆನ್ಸ್ ಮೂಲಕ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. 10 ಮಂದಿ ಚಿಕಿತ್ಸೆ ಪಡೆದು ಗುರುವಾರ ಹಾಸ್ಟೆಲ್‌ಗೆ ವಾಪಾಸ್ ಆಗಿದ್ದಾರೆ. ಐವರು ವಿದ್ಯಾರ್ಥಿನಿಯರ ಸ್ಥಿತಿ ಗಂಭೀರವಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಅನಿಲ್ ಕುಮಾರ್ ಅವರು ಆಸ್ಪತ್ರೆಗೆ ಭೇಟಿ ನೀಡಿ ಮಾಹಿತಿ ಪಡೆದಿದ್ದಾರೆ.

ಹಾಸ್ಟೆಲ್‌ಗೆ ಸಿಲಿಂಡರ್ ಸಿಗದ ಪರಿಣಾಮ ವಿದ್ಯಾರ್ಥಿಗಳ ಜೀವಕ್ಕೆ ಅಪಾಯ ಉಂಟಾಗಿದ್ದು, ಅಗತ್ಯವಿರುವಷ್ಟು ಸಿಲಿಂಡರ್‌ಗಳನ್ನು ಪೂರೈಕೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಪೋಷಕರು ಒತ್ತಾಯಿಸಿದ್ದಾರೆ.

# ಉಚಿತ ಬಸ್ ಪಾಸ್: ಅರ್ಜಿ ಸಲ್ಲಿಕೆಗೆ ಅವಕಾಶ

• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದ ಎಲ್ಲಾ ಶಾಲಾ-ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವುದಾಗಿ ಘೋಷಿಸಿರುವ ರಾಜ್ಯ ಸರ್ಕಾರ ಅರ್ಜಿ ಪ್ರಕ್ರಿಯೆಗೆ ಚಾಲನೆ ನೀಡಿದೆ.

ವಿದ್ಯಾರ್ಥಿಗಳು ಒಂದೆರಡು ದಿನಗಳಲ್ಲಿ ಕರ್ನಾಟಕ ಒನ್, ಬೆಂಗಳೂರು ಒನ್ ಕಚೇರಿಗಳಲ್ಲಿ ನಿಗದಿತ ಅರ್ಜಿ ಸಲ್ಲಿಸಬೇಕು. ಪರಿಶೀಲನೆ ನಡೆಸಿದ ನಂತರ ಉಚಿತವಾಗಿ ಪಾಸ್ ವಿತರಿಸಲಾಗುತ್ತದೆಂದು ಸಾರಿಗೆ ಸಚಿವ ಬೈರತಿ ಸುರೇಶ್ ಅವರು ಹೇಳಿದ್ದಾರೆ.

ಈಗಾಗಲೇ ಹಣ ಪಾವತಿ ಮಾಡಿ ಪಾಸ್ ಖರೀದಿಸಿರುವ ವಿದ್ಯಾರ್ಥಿಗಳಿಗೆ ಆ ಹಣ ವಾಪಾಸ್ ನೀಡಲಾಗುವುದು. ಆರ್ಥಿಕ ಹೊರೆ ಇಲ್ಲದೆ ವಿದ್ಯಾಭ್ಯಾಸ ಮಾಡಬೇಕೆನ್ನುವುದು ಸರ್ಕಾರದ ಉದ್ದೇಶವಾಗಿದೆ ಎಂದರು.

## ತಮ್ಮ ಇಲಾಖೆಗಳ ಕಾರ್ಯಭಾರದಲ್ಲೇ ನಿರತ | ಗ್ರಾ.ಪಂ.ಗಳಲ್ಲಿ ಹೇಳೋರಿಲ್ಲ, ಕೇಳೋರಿಲ್ಲ

# ಆಡಳಿತಾಧಿಕಾರಿಗಳಿಂದ ಪಂಚಾಯಿತಿ ಜವಾಬ್ದಾರಿ ನಿರ್ಲಕ್ಷ್ಯ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ಗ್ರಾಮ ಪಂಚಾಯಿತಿ ಚುನಾಯಿತ ಪ್ರತಿನಿಧಿಗಳ ಅವಧಿ ಮುಕ್ತಾಯಗೊಂಡಿರುವ ಹಿನ್ನಲೆ ಆಡಳಿತಾಧಿಕಾರಿಗಳ ನೇಮಕ ಮಾಡಲಾಗಿದೆ. ಆದರೆ, ತಮ್ಮ ಇಲಾಖೆಗಳ ಕಾರ್ಯಭಾರದಲ್ಲಿ ನಿರತರಾಗಿರುವ ಅಧಿಕಾರಿಗಳಿಗೆ ಹೆಚ್ಚುವರಿ ಜವಾಬ್ದಾರಿಯಾಗಿ ಪಂಚಾಯಿತಿಗಳ ಆಡಳಿತ ನಿರ್ವಹಣೆಯಲ್ಲಿ ನಿರ್ಲಕ್ಷ್ಯ ತೋರುತ್ತಿದ್ದಾರೆ.

ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಆಡಳಿತಾಧಿಕಾರಿಗಳು ಯಾವಾಗ ಭೇಟಿ ನೀಡುತ್ತಾರೆ ಎಂಬುದೇ ಯಾರಿಗೂ ತಿಳಿಯುವುದಿಲ್ಲ. ಪಿಡಿಒಗಳು ಕೂಡ ಕಚೇರಿಯಲ್ಲಿ ಇರುವು





ದಿಲ್ಲ. ಹೀಗಾಗಿ ಗ್ರಾಮಾಭಿವೃದ್ಧಿ ಜವಾಬ್ದಾರಿ ಹೊತ್ತಿರುವ ಗ್ರಾಮ ಪಂಚಾಯಿತಿಗಳಲ್ಲಿ ಹೇಳೋರಿಲ್ಲ, ಕೇಳೋರಿಲ್ಲ ಎಂಬ ಪರಿಸ್ಥಿತಿ ನಿರ್ಮಾಣವಾಗಿದೆ.

ಕೃಷಿ, ತೋಟಗಾರಿಕೆ, ರೇಷ್ಮೆ ಸೇರಿ ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಗ್ರಾಮ ಪಂಚಾಯಿತಿಗಳ ಆಡಳಿತಾಧಿಕಾರಿ ಜವಾಬ್ದಾರಿ ನೀಡಲಾಗಿದೆ. ಹಲವೆಡೆ ಒಬ್ಬ ಅಧಿಕಾರಿಗೆ ಎರಡು ಅಥವಾ ಮೂರು ಗ್ರಾಮ ಪಂಚಾಯಿತಿಗಳ ಹೊಣೆಗಾರಿಕೆ ವಹಿಸಲಾಗಿದೆ. ಇಲಾಖಾ ಕೆಲಸ ಮತ್ತು ಪಂಚಾಯಿತಿ ಆಡಳಿತವನ್ನು ಸಮತೋಲನದಲ್ಲಿ ನಿರ್ವಹಿಸುವುದು ಅಧಿಕಾರಿಗಳಿಗೆ ಕಷ್ಟಕರವಾಗಿದೆ.

ಕೃಷಿ ಇಲಾಖೆಯ ಅಧಿಕಾರಿಗಳು ರೈತರಿಗೆ ಬೆಳೆ ನಿರ್ವಹಣೆ, ಬೆಳೆ ವಿಮೆ, ರಸಗೊಬ್ಬರ ಬಳಕೆ, ಕೀಟನಾಶಕ ಸಿಂಪಡಣೆ ಸೇರಿ ವಿವಿಧ ವಿಷಯಗಳಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಆದರೆ, ದಿನದ ಬಹುತೇಕ ಸಮಯ ಪಂಚಾಯಿತಿ ಸಂಬಂಧಿತ ಕೆಲಸಗಳಿಗೆ ಮೀಸಲಾಗುತ್ತಿರುವುದರಿಂದ ಇಲಾಖಾ ಯೋಜನೆಗಳ ಅನುಷ್ಠಾನ ಹಾಗು ಮೇಲ್ವಿಚಾರಣೆ ಮೇಲೆ ಪರಿಣಾಮ ಬೀರುತ್ತಿದೆ.

» ನಾಲ್ಕನೇ ಪುಟದಲ್ಲಿ

### ಬಯೋಮೆಟ್ರಿಕ್ ಹಾಜರಾತಿ ಜಾರಿ

ಗ್ರಾಮ ಪಂಚಾಯಿತಿಗಳಲ್ಲಿ ಸರ್ಕಾರಿ ನೌಕರರಾದ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳು, ದ್ವಿತೀಯ ದರ್ಜೆ ಲೆಕ್ಕ ಸಹಾಯಕರುಗಳು ಕಡ್ಡಾಯವಾಗಿ ಪ್ರತಿನಿತ್ಯ ಪಂಚತಂತ್ರ 2.0 ತಂತ್ರಾಂಶದಲ್ಲಿ ಬಯೋಮೆಟ್ರಿಕ್ ಹಾಜರಾತಿಯನ್ನು ದಾಖಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಜರಾತಿಯನ್ನು ಪರಿಶೀಲಿಸಲು ಸರ್ಕಾರ ನಿರ್ದೇಶನ ನೀಡಿದೆ.

### ಚುನಾವಣೆ ನಡೆಯುವವರೆಗೂ ಇದೇ ಸ್ಥಿತಿ

ಗ್ರಾಮ ಪಂಚಾಯಿತಿ ಚುನಾವಣೆ ನಡೆದು, ಜನಪ್ರತಿನಿಧಿಗಳು ಅಧಿಕಾರ ವಹಿಸಿಕೊಳ್ಳುವವರೆಗೆ ಇದೇ ಪರಿಸ್ಥಿತಿ ಮುಂದುವರೆಯಲಿದೆ. ಸದ್ಯಕ್ಕೆ ಅಧಿಕಾರಿಗಳ ಮೇಲಿನ ಒತ್ತಡ ಕಡಿಮೆಯಾಗುವ ಸಾಧ್ಯತೆ ಕಾಣುತ್ತಿಲ್ಲ. ಇದರ ಜೊತೆಗೆ ಜಿಲ್ಲಾ ಪಂಚಾಯಿತಿ ಹಾಗು ತಾಲ್ಲೂಕು ಪಂಚಾಯಿತಿಗಳ ಚುನಾಯಿತ ಸದಸ್ಯರಿಲ್ಲದ ಕಾರಣ ಸ್ಥಳೀಯ ಆಡಳಿತದ ಸಂಪೂರ್ಣ ಹೊಣೆ ಈಗ ಅಧಿಕಾರಿಗಳ ಮೇಲಿದೆ. ಹೀಗಾಗಿ ಜಿಲ್ಲಾ, ತಾಲ್ಲೂಕು, ಗ್ರಾಮ ಪಂಚಾಯಿತಿ ಆಡಳಿತ ಶಿಥಿಲಾವಸ್ಥೆಗೆ ತಲುಪಿದೆ.

# ರಾಜ್ಯಸಭೆಗೆ ನಾಲ್ವರು ಅವಿರೋಧ ಆಯ್ಕೆ

**ಬೆಂಗಳೂರು:** ರಾಜ್ಯಸಭೆಯ ದ್ವೈವಾರ್ಷಿಕ ಚುನಾವಣೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿ ಕಾಂಗ್ರೆಸ್‌ನ ಮೂವರು ಮತ್ತು ಬಿಜೆಪಿಯ ಒಬ್ಬರು ಕರ್ನಾಟಕದಿಂದ ರಾಜ್ಯಸಭೆಗೆ ಅವಿರೋಧ ಆಯ್ಕೆಯಾಗಿದ್ದಾರೆ.

ಎಐಸಿಸಿ ಕಾರ್ಯದರ್ಶಿ ಮನ್ಸೂರ್ ಅಲಿಖಾನ್, ಕಾಂಗ್ರೆಸ್‌ನ ಮಾಧ್ಯಮ ಮತ್ತು ಪ್ರಸಾರ ವಿಭಾಗದ ಮುಖ್ಯಸ್ಥ ಪವನ್ ಖೇರ ಮತ್ತು ಬಿಜೆಪಿಯಿಂದ ಪ್ರೊ.ಎಂ.ನಾಗರಾಜ್ ಆಯ್ಕೆಯಾಗಿದ್ದಾರೆ. ಪ್ರಸ್ತುತ ರಾಜ್ಯಸಭೆಯ ಸದಸ್ಯರಾಗಿರುವ ಬಿಜೆಪಿಯ ಈರಣ್ಣ ಕಡಾಡಿ, ನಾರಾಯಣ ಕೊರಗಪ್ಪ,, ಮಲ್ಲಿಕಾರ್ಜುನ ಖರ್ಗೆ, ಹೆಚ್. ಡಿ. ದೇವೇಗೌಡ ಅವರ ಅವಧಿ ಜೂನ್ 25ಕ್ಕೆ ಕೊನೆಗೊಳ್ಳುವುದರಿಂದ ರಾಜ್ಯದಿಂದ ನಾಲ್ಕು ರಾಜ್ಯಸಭಾ ಸ್ಥಾನಗಳನ್ನು ಭರ್ತಿ ಮಾಡಲು ಚುನಾವಣೆ ಘೋಷಿಸಲಾಗಿತ್ತು.

E-mail : prajodayahsn@gmail.com
ಪ್ರಜೋದಯ
12 ಜೂನ್ 2026 ಶುಕ್ರವಾರ

# ಸಿನಿ ಪ್ರಜಾ

## ಜೂನ್ 2026 ರ ಎರಡನೇ ವಾರವು ಭಾರತದಾದ್ಯಂತ ಥಿಯೇಟ್ರಿಕಲ್ ಬಿಡುಗಡೆಗಳು ಮತ್ತು ಪ್ರೀಮಿಯರ್ ಗಳ ರೋಮಾಂಚಕಾರಿ ಮಿಶ್ರಣವನ್ನು ತರುತ್ತದೆ. ಈ ಎಲ್ಲಾ ರೋಮಾಂಚನಕಾರಿ ಚಿತ್ರಗಳನ್ನು ತಪ್ಪದೇ ವಿಕ್ಷೀಸಿ.

# ಈ ವಾರದ ಬಿಡುಗಡೆ ಚಲನಚಿತ್ರಗಳು

**ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಬಾಲಿವುಡ್ ಚಲನಚಿತ್ರಗಳು**

**ಹಾಂಟೆಡ್ 3ಡಿ:** ಹಿಂದಿನ ಪ್ರತಿಧ್ವನಿಗಳು: ಹಾಂಟೆಡ್ 3ಡಿ: ಎಕೋಸ್ ಆಫ್ ದಿ ಪಾಸ್ಟ್ ಒಂದು ಹಿಂದಿ ಅಲೌಕಿಕ ಹಾರರ್ ಥ್ರಿಲ್ಲರ್ ಆಗಿದ್ದು, ಇದನ್ನು ವಿಕ್ರಮ್ ಭಟ್ ನಿರ್ದೇಶಿಸಿದ್ದಾರೆ ಮತ್ತು ಮಹಾಕ್ಷಯ್ ಚಕ್ರವರ್ತಿ ಮತ್ತು ಚೇತನಾ ಪಾಂಡೆ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. 2011 ರ ಹಿಟ್ ಹಾಂಟೆಡ್ – 3ಡಿ ಚಿತ್ರದ ಆಧ್ಯಾತ್ಮಿಕ ಉತ್ತರಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಈ ಚಿತ್ರವು ಭಯಾನಕ ಅಲೌಕಿಕ ಮುಖಾಮುಖಿಗಳು, ಕರಾಳ ರಹಸ್ಯಗಳು ಮತ್ತು ಚಿಲ್ಲಿಂಗ್ ಟ್ವಿಸ್ಟ್‌ಗಳನ್ನು ಭರವಸೆ ನೀಡುತ್ತದೆ. ಹಾರರ್ ಎಂಟರ್‌ಟೈನರ್ ಜೂನ್ 12 ರಿಂದ ಚಿತ್ರಮಂದಿರಗಳಲ್ಲಿ ಪ್ರೇಕ್ಷಕರನ್ನು ಹೆದರಿಸಲು ಸಿದ್ಧವಾಗಿದೆ.




**ಮೈ ವಾಪಸ್ ಆವುಂಗಾ:** ಇಮ್ತಿಯಾಜ್ ಅಲಿ ನಿರ್ದೇಶನದ, ಮೈ ವಾಪಸ್ ಆವುಂಗಾ ಒಂದು ಪ್ರಣಯ ಅವಧಿಯ ನಾಟಕವಾಗಿದ್ದು, ದಿಲ್ಜಿತ್ ದೋಸಾಂಜ್, ಶಾರ್ವರಿ, ವೇದಾಂಗ್ ರೈನಾ ಮತ್ತು ನಾಸಿರುದ್ದೀನ್ ಶಾ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. 1947 ರ ಭಾರತ–ಪಾಕಿಸ್ತಾನ ವಿಭಜನೆಯ ಹಿನ್ನೆಲೆಯಲ್ಲಿ, ಈ ಚಿತ್ರವು ತಲೆಮಾರುಗಳಾದ್ಯಂತ ಪ್ರೀತಿ, ಬೇರ್ಪಡುವಿಕೆ ಮತ್ತು ಭರವಸೆಯ ವಿಷಯಗಳನ್ನು ಅನ್ವೇಷಿಸುತ್ತದೆ. ಭಾವನಾತ್ಮಕ ನಾಟಕವು ಜೂನ್ 12 ರಂದು ಥಿಯೇಟರ್‌ಗಳಲ್ಲಿ ಬಿಡುಗಡೆಯಾಗಲಿದೆ.

**ಗವನರ್: ದಿ ಸೈಲೆಂಟ್ ಸೇವಿಯರ್:** ಗವನರ್: ದಿ ಸೈಲೆಂಟ್ ಸೇವಿಯರ್ ಒಂದು ಹಿಂದಿ ಹಣಕಾಸು ಥ್ರಿಲ್ಲರ್ ಆಗಿದ್ದು, ಇದನ್ನು ಚಿನ್ಮಯ್ ಡಿ. ಮಾಂಡ್ಲೇಕರ್ ನಿರ್ದೇಶಿಸಿದ್ದಾರೆ ಮತ್ತು ಮನೋಜ್ ಬಾಜ್‌ಪೇಯಿ, ಅದಾ ಶರ್ಮಾ ಮತ್ತು ನೌಶಾದ್ ಮೊಹಮ್ಮದ್ ಕುಂಜು ನಟಿಸಿದ್ದಾರೆ. ನೈಜ ಘಟನೆಗಳಿಂದ ಪ್ರೇರಿತವಾದ ಈ ಚಿತ್ರವು 1990 ರ ದಶಕದ ಆರಂಭದಲ್ಲಿ ಭಾರತದ ಆರ್ಥಿಕ ಬಿಕ್ಕಟ್ಟನ್ನು ಮತ್ತು ಪ್ರಕ್ಷುಬ್ಧ ಸಮಯದಲ್ಲಿ ದೇಶವನ್ನು ಮುನ್ನಡೆಸುವಲ್ಲಿ ಆರ್‌ಬಿಐ ಗವರ್ನರ್ ಎಸ್. ವೆಂಕಟರಮಣನ್ ಅವರ ಪ್ರಯತ್ನಗಳನ್ನು ವಿವರಿಸುತ್ತದೆ. ಈ ಹಿಡಿತದ ನಾಟಕವು ಜೂನ್ 12 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಭಾರತ್ ಭಾಗ್ಯ ವಿಧಾತ:** ಕಂಗನಾ ರನೌತ್ ಅವರ ಶೀರ್ಷಿಕೆಯಲ್ಲಿ, ಭಾರತ್ ಭಾಗ್ಯ ವಿಧಾತವು 2008 ರ ಮುಂಬೈ ಭಯೋತ್ಪಾದಕ ದಾಳಿಯ ಸಮಯದಲ್ಲಿ ಪ್ರದರ್ಶಿಸಲಾದ ಧೈರ್ಯದಿಂದ ಪ್ರೇರಿತವಾದ ಜೀವನಚರಿತ್ರೆಯ ಥ್ರಿಲ್ಲರ್ ಆಗಿದೆ. ದುರಂತದ ಮೇಲೆ ಕೇಂದ್ರೀಕರಿಸುವ ಬದಲು, ನೂರಾರು ರೋಗಿಗಳನ್ನು ಉಳಿಸಲು ತಮ್ಮ ಪ್ರಾಣವನ್ನೇ ಪಣಕ್ಕಿಟ್ಟ ಆಸ್ಪತ್ರೆ ಸಿಬ್ಬಂದಿಯ ಧೈರ್ಯವನ್ನು ಈ ಚಿತ್ರ ಎತ್ತಿ ತೋರಿಸುತ್ತದೆ. ಸ್ಫೂರ್ತಿದಾಯಕ ನಾಟಕವು ಜೂನ್ 12 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.

**ಹೀರ್ ಸಾರಾ ಔರ್ ಪಾಂಡಿಚೇರಿ:** ಹೀರ್ ಸಾರಾ ಔರ್ ಪಾಂಡಿಚೇರಿ ಒಂದು ರಸ್ತೆ–ಪ್ರವಾಸ ನಾಟಕವಾಗಿದ್ದು, ಉತ್ತರಗಳು ಮತ್ತು ವೈಯಕ್ತಿಕ ಅಂತ್ಯದ ಹುಡುಕಾಟದಲ್ಲಿ ದಕ್ಷಿಣ ಭಾರತದಾದ್ಯಂತ ಮೋಟಾರ್ ಸೈಕಲ್ ಪ್ರಯಾಣವನ್ನು ಕೈಗೊಳ್ಳುವ ಇಬ್ಬರು ಮಹಿಳೆಯರನ್ನು ಇದು ಅನುಸರಿಸುತ್ತದೆ. ಅವರ ವೈಯಕ್ತಿಕ ಧ್ಯೇಯಗಳು ಹೆಣೆದುಕೊಂಡಂತೆ, ಅವರು ದಾರಿಯುದ್ದಕ್ಕೂ ಸ್ನೇಹ, ಸ್ವಾತಂತ್ರ್ಯ ಮತ್ತು ಸ್ವಯಂ–ಅನ್ವೇಷಣೆಯನ್ನು ಕಂಡುಕೊಳ್ಳುತ್ತಾರೆ. ಉತ್ತಮ ಪ್ರಯಾಣ ನಾಟಕವು ಜೂನ್ 12 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಈ ವಾರ ತಮಿಳು ನಾಟಕೀಯ ಬಿಡುಗಡೆಗಳು**

**ಡಬಲ್ ಆಕ್ಯುಪೆನ್ಸಿ:** ಡಬಲ್ ಆಕ್ಯುಪೆನ್ಸಿ ಎಂಬುದು ಅಶ್ವಿನ್ ಕಂದಸಾಮಿ ಬರೆದು ನಿರ್ದೇಶಿಸಿದ ತಮಿಳು ನಾಟಕವಾಗಿದ್ದು, ಸಂತೋಷ್ ಮತ್ತು ರೇಷ್ಮಾ ವೆಂಕಟೇಶ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ವಿನೋತ್ ಕಿಶನ್ ಮತ್ತು ವಿಟಿವಿ ಗಣೇಶ್ ಸೇರಿದಂತೆ ಸಮಗ್ರ ಪಾತ್ರವರ್ಗದ ಬೆಂಬಲದೊಂದಿಗೆ, ಈ ಚಿತ್ರವು ಸಮಕಾಲೀನ ನಿರೂಪಣೆಯ ಮೂಲಕ ಸಂಬಂಧಗಳು ಮತ್ತು ಭಾವನಾತ್ಮಕ ಸಂಕೀರ್ಣತೆಗಳನ್ನು ಪರಿಶೋಧಿಸುತ್ತದೆ. ಈ ನಾಟಕವು ಜೂನ್ 12 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.

**ಮೂಂದ್ರಮ್ ಕಾನ್:** ಮೂಂದ್ರಮ್ ಕಾನ್ ಮುಂಬರುವ ತಮಿಳು ಅಪರಾಧ ನಿಗೂಢ ಥ್ರಿಲ್ಲರ್ ಆಗಿದ್ದು, ಸಾಗೋ ಗಣೇಶನ್ ನಿರ್ದೇಶಿಸಿದ್ದಾರೆ ಮತ್ತು ವಿದಾರ್ಥ್, ಕಲೈಯರಸನ್, ಸಂತೋಷ್ ಪ್ರತಾಪ್, ತ್ರಿಗುನ್, ತೇಜು ಅಶ್ವಿನಿ, ಅತುಲ್ಯ ಚಂದ್ರ ಮತ್ತು ಜಾನ್ ವಿಜಯ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಕಥೆಯು ಭಯಭೀತ ಕಾರ್ಖಾನೆಯ ಜನರಲ್ ಮ್ಯಾನೇಜರ್‌ನ ಕೊಲೆಯ ಸುತ್ತ ಸುತ್ತುತ್ತದೆ, ರಹಸ್ಯಗಳು, ಉದ್ದೇಶಗಳು ಮತ್ತು ಗುಪ್ತ ಸತ್ಯಗಳಿಂದ ತುಂಬಿದ ಸಂಕೀರ್ಣ ತನಿಖೆಯಲ್ಲಿ ಅನೇಕ ಶಂಕಿತರು ಸಿಕ್ಕಿಹಾಕಿಕೊಳ್ಳುತ್ತಾರೆ. ಸಸ್ಪೆನ್ಸ್ ಥ್ರಿಲ್ಲರ್ ಜೂನ್ 12, 2026 ರಂದು ಥಿಯೇಟ್ರಿಕಲ್ ಬಿಡುಗಡೆಗೆ ನಿರ್ಧರಿಸಲಾಗಿದೆ.

**ಹಬೀಬಿ:** ಹಬೀಬಿ ತಮಿಳು ಕಾಲದ ಪ್ರಣಯ ನಾಟಕವಾಗಿದ್ದು, ಮೀರಾ ಕಥಿರವನ್ ನಿರ್ದೇಶಿಸಿದ್ದಾರೆ ಮತ್ತು ಇಶಾ ಮೊಹಮ್ಮದ್, ಮಾಳವಿಕಾ ಮೋನೋಜ್, ಧನಶ್ರೀ ಸುಧಾಕರನ್, ಕಸ್ತೂರಿ ರಾಜ ಮತ್ತು ಅನುಶ್ರೇಯ ರಾಜನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಸಾಂಪ್ರದಾಯಿಕ ತಮಿಳು ಮುಸ್ಲಿಂ ಕುಟುಂಬದ ಹಿನ್ನೆಲೆಯಲ್ಲಿ ಹೆಣೆಯಲಾದ ಈ ಚಿತ್ರವು, ಪ್ರಣಯ ಮತ್ತು ಕೌಟುಂಬಿಕ ಭಾವನೆಗಳ ಮೂಲಕ ಭೂತ ಮತ್ತು ವರ್ತಮಾನವನ್ನು ಸಂಪರ್ಕಿಸುವ, ವಿಭಿನ್ನ ತಲೆಮಾರುಗಳಲ್ಲಿ ತೆರೆದುಕೊಳ್ಳುವ ಕಾಲಾತೀತ ಪ್ರೇಮಕಥೆಯನ್ನು ಗುರುತಿಸುತ್ತದೆ. ಈ ಚಿತ್ರವು ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ನಿಜಲ್:** ನಿಜಲ್ ಎ.ಕೆ. ಕುಮಾರ್ ನಿರ್ದೇಶನದ ತಮಿಳು ಕ್ರೈಮ್ ಡ್ರಾಮಾ ಥ್ರಿಲ್ಲರ್ ಆಗಿದ್ದು, ಜನನಿ ಗುಣಶೀಲನ್, ಕೌಶಿಕ್ ಗೋಪಾಲನ್, ಶ್ರೀ ವಿಶಾಕನ್ ಮತ್ತು ದಿವ್ಯಾ ಕೃಷ್ಣನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರವು ಅವಳಿ ಸಹೋದರಿಯರ ಜೀವನವನ್ನು ಕ್ರೂರ ಅಪರಾಧದಿಂದ ಛಿದ್ರಗೊಳಿಸುವುದನ್ನು ಅನುಸರಿಸುತ್ತದೆ, ಅವರಲ್ಲಿ ಒಬ್ಬರನ್ನು ಸೇಡಿನ ಅಪಾಯಕಾರಿ ಹಾದಿಗೆ ಕರೆದೊಯ್ಯುತ್ತದೆ ಮತ್ತು ಪೊಲೀಸ್ ತನಿಖೆಯು ಆಘಾತಕಾರಿ ಸತ್ಯಗಳನ್ನು ಬಹಿರಂಗಪಡಿಸುತ್ತದೆ. ಸಸ್ಪೆನ್ಸ್, ಆಕ್ಷನ್ ಮತ್ತು ಭಾವನಾತ್ಮಕ ನಾಟಕವನ್ನು ಮಿಶ್ರಣ ಮಾಡುವ ಈ ಚಿತ್ರವು ಜೂನ್ 12, 2026 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.

**ಚಾರುಕೇಸಿ:** ಚಾರುಕೇಸಿ ತಮಿಳು ಕೌಟುಂಬಿಕ ಸಂಗೀತ ನಾಟಕವಾಗಿದ್ದು, ಸುರೇಶ್ ಕೃಷ್ಣ ನಿರ್ದೇಶಿಸಿದ್ದಾರೆ ಮತ್ತು ಸತ್ಯರಾಜ್, ಸುಹಾಸಿನಿ ಮಣಿರತ್ನಂ, ಸಮುತಿರಕಣಿ, ರಮ್ಯಾ ಪಾಂಡಿಯನ್, ರಾಜ್ ಅಯ್ಯಪ್ಪ ಮತ್ತು ವೈ.ಜಿ. ಮಹೇಂದ್ರನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರವು ಪ್ರಸಿದ್ಧ ಕರ್ನಾಟಕ ಸಂಗೀತಗಾರ ಆಲ್ಝೈಮರ್ ಕಾಯಿಲೆಯೊಂದಿಗೆ ಹೋರಾಡುತ್ತಿರುವುದನ್ನು ಕೇಂದ್ರೀಕರಿಸುತ್ತದೆ, ಆದರೆ ದೀರ್ಘಕಾಲದಿಂದ ಹೂತುಹೋಗಿರುವ ಕುಟುಂಬ ಘರ್ಷಣೆಗಳು ಮತ್ತೆ ಉದ್ಭವಿಸುತ್ತವೆ, ಇದು ಭಾವನಾತ್ಮಕ ಮತ್ತು ಹೃತ್ಪೂರ್ವಕ ನಿರೂಪಣೆಯನ್ನು ಸೃಷ್ಟಿಸುತ್ತದೆ. ಸಂಗೀತಮಯ ಕೌಟುಂಬಿಕ ನಾಟಕವು ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ವಲ್ಲುವನ್:** ಶಂಕರ್ ಸಾರಥಿ ನಿರ್ದೇಶಿಸಿರುವ ವಲ್ಲುವನ್ ತಮಿಳು ಆಕ್ಷನ್ ಥ್ರಿಲ್ಲರ್ ಚಿತ್ರವನ್ನು ಚೇತನ್ ಚೀನು, ಅಶ್ನಾ ಜವೇರಿ, ಸಾಯಿ ದೀನಾ ಮತ್ತು ಮನೋಬಾಲಾ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಆಕ್ಷನ್, ಸಸ್ಪೆನ್ಸ್ ಮತ್ತು ತೀವ್ರವಾದ ನಾಟಕದಿಂದ ತುಂಬಿರುವ ಈ ಚಿತ್ರವು ಶಕ್ತಿ, ಬದುಕುಳಿಯುವಿಕೆ ಮತ್ತು ವೈಯಕ್ತಿಕ ಸಂಘರ್ಷಗಳನ್ನು ಅನ್ವೇಷಿಸುವ ಒಂದು ರೋಮಾಂಚಕಾರಿ ಕಥಾಹಂದರವನ್ನು ಅನುಸರಿಸುತ್ತದೆ. ಆಕ್ಷನ್–ಪ್ಯಾಕ್ಡ್ ಎಂಟರ್‌ಟೈನರ್ ಜೂನ್ 12, 2026 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.

**ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ತೆಲುಗು ಚಲನಚಿತ್ರಗಳು**

**ಸಿಂಗ್ ಗೀತಂ:** ಸಿಂಗ್ ಗೀತಂ ತೆಲುಗು ನಿಗೂಢ ಹಾಸ್ಯ ಥ್ರಿಲ್ಲರ್ ಆಗಿದ್ದು, ಹಿರಿಯ ಚಲನಚಿತ್ರ ನಿರ್ಮಾಪಕ ಸಿಂಗೀತಂ ಶ್ರೀನಿವಾಸ ರಾವ್ ನಿರ್ದೇಶಿಸಿದ್ದಾರೆ ಮತ್ತು ಅಯಾನ್, ಅಹಲ್ಯ ಬಮ್ರೂ ಮತ್ತು ಶಾಲಿನಿ ಕೊಂಡೇಪುಡಿ ನಟಿಸಿದ್ದಾರೆ. ವೈಜಯಂತಿ ಮೂವೀಸ್ ಮತ್ತು ಸ್ವಪ್ನ ಸಿನಿಮಾ ಬ್ಯಾನರ್‌ಗಳ ಅಡಿಯಲ್ಲಿ ನಾಗ್ ಅಶ್ವಿನ್ ನಿರ್ಮಿಸಿರುವ ಈ ಚಿತ್ರವು ಸಸ್ಪೆನ್ಸ್, ಹಾಸ್ಯ ಮತ್ತು ನಿಗೂಢತೆಯ ಮನರಂಜನಾ ಮಿಶ್ರಣವನ್ನು ನೀಡುತ್ತದೆ. ಬಹುನಿರೀಕ್ಷಿತ ಮನರಂಜನಾ ಚಿತ್ರ ಜೂನ್ 12 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಪೊಲೀಸ್ ದೂರು:** ಪೊಲೀಸ್ ದೂರು ಮುಂಬರುವ ತೆಲುಗು ಅಪರಾಧ ಸಸ್ಪೆನ್ಸ್ ಥ್ರಿಲ್ಲರ್ ಆಗಿದ್ದು, ಸಂಜೀವ್ ಮೇಗೋಟಿ ನಿರ್ದೇಶಿಸಿದ್ದಾರೆ ಮತ್ತು ನವೀನ್ ಚಂದ್ರ, ವರಲಕ್ಷ್ಮಿ ಶರತ್‌ಕುಮಾರ್, ಕೃಷ್ಣ ಸಾಯಿ ಮಕಿನೇನಿ ಮತ್ತು ರಾಗಿಣಿ ದ್ವಿವೇದಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಕಥೆಯು ಮಾಟಮಂತ್ರ ಆಚರಣೆಗಳಿಗೆ ಸಂಬಂಧಿಸಿದ ಕೊಲೆಯ ಪೊಲೀಸ್ ತನಿಖೆಯನ್ನು ಅನುಸರಿಸುತ್ತದೆ, ಆಘಾತಕಾರಿ ರಹಸ್ಯಗಳು ಮತ್ತು ನಿಗೂಢ ಸಾವುಗಳನ್ನು ಬಹಿರಂಗಪಡಿಸುತ್ತದೆ. ಈ ಚಿತ್ರವು ಜೂನ್ 12, 2026 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.

**ನಾನು ಸುಂದರವಾಗಿದ್ದೇನೆ (2009 ರಿಂದ):** ದುರ್ಘ ದೇವ್ ನಾಯ್ಡು ನಿರ್ದೇಶನದ, ಐ ಆಮ್ ಹ್ಯಾಂಡ್ಸಮ್ (2009 ರಿಂದ) ಒಂದು ತೆಲುಗು ಪ್ರಣಯ ನಾಟಕವಾಗಿದ್ದು, ದುರ್ಘ ದೇವ್ ನಾಯ್ಡು, ಅನ್ವಿಶಾ ಕ್ರಾಂತಿ, ರೂಪಾ ಕಲಾ ಮತ್ತು ಕೇದಾರ್ ಶಂಕರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರವು ತನ್ನ ಮಗನಿಗಾಗಿ ಮಾಡುವ ತ್ಯಾಗಗಳು ಪ್ರೀತಿ, ಕುಟುಂಬ ಬಂಧಗಳು ಮತ್ತು ವೈಯಕ್ತಿಕ ನಷ್ಟದ ಭಾವನಾತ್ಮಕ ಪ್ರಯಾಣಕ್ಕೆ ಕಾರಣವಾಗುವ ಒಬ್ಬ ಕಷ್ಟಪಟ್ಟು ಕೆಲಸ ಮಾಡುವ ಮೇಸ್ತ್ರಿಯ ಸುತ್ತ ಸುತ್ತುತ್ತದೆ. ಈ ಚಿತ್ರವು ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಡೇಂಜರ್ ಡೆವಿಲ್:** ಡೇಂಜರ್ ಡೆವಿಲ್ ಎಸ್.ಎಸ್. ರೆಡ್ಡಿ ನಿರ್ದೇಶನದ ತೆಲುಗು ಹಾರರ್ ಥ್ರಿಲ್ಲರ್ ಆಗಿದ್ದು, ಎಸ್.ಎಸ್. ಅಭಿಲಾಷ್ ಮತ್ತು ಭವಾನಿ ಕೆ.ಎನ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಚಿತ್ರವು ಒಂದು ದುರಂತ ಪ್ರೇಮಕಥೆಯನ್ನು ಅನುಸರಿಸುತ್ತದೆ, ಯುವತಿಯೊಬ್ಬಳು ತನ್ನ ಸಾವಿಗೆ ಕಾರಣರಾದವರ ವಿರುದ್ಧ ಸೇಡು ತೀರಿಸಿಕೊಳ್ಳಲು ಆತ್ಮವಾಗಿ ಹಿಂತಿರುಗಿದಾಗ ಅದು ಅಲೌಕಿಕ ತಿರುವು ಪಡೆಯುತ್ತದೆ. ಹಾರರ್ ಎಂಟರ್‌ಟೈನರ್ ಜೂನ್ 12, 2026 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.




**ಕೋಥ ಮಲುಪು:** ಶಿವ ವರ ಪ್ರಸಾದ್ ಕೆ. ನಿರ್ದೇಶನದ ಕೋಥ ಮಲುಪು ತೆಲುಗು ನಾಟಕವಾಗಿದ್ದು, ಆಕಾಶ್ ಗೋಪರಾಜು, ಭೈರವಿ ಅರ್ಧ್ಯ, ರಘು ಬಾಬು ಮತ್ತು ಪ್ರಭಾವತಿ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಪ್ರಣಯ ಸಸ್ಪೆನ್ಸ್ ಎಂಟರ್‌ಟೈನರ್ ಆಗಿ ನಿರ್ಮಿಸಲಾದ ಈ ಚಿತ್ರವು ಭಾವನೆಗಳು, ನಿಗೂಢತೆ ಮತ್ತು ಅನಿರೀಕ್ಷಿತ ತಿರುವುಗಳ ಆಕರ್ಷಕ ಮಿಶ್ರಣವನ್ನು ನೀಡುತ್ತದೆ. ಈ ಚಿತ್ರವು ಜೂನ್ 12, 2026 ರಂದು ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಮಲಯಾಳಂ ಚಲನಚಿತ್ರಗಳು**

**ವರವು:** ವರವು ಮಲಯಾಳಂನ ಆಕ್ಷನ್–ಥ್ರಿಲ್ಲರ್ ಚಿತ್ರವಾಗಿದ್ದು, ಶಾಜಿ ಕೈಲಾಸ್ ನಿರ್ದೇಶಿಸಿದ್ದಾರೆ ಮತ್ತು ಜೋಜು ಜಾರ್ಜ್ ಪ್ರಮುಖ ಪಾತ್ರದಲ್ಲಿ ನಟಿಸಿದ್ದಾರೆ. ಎಕೆ ಸಾಜಾನ್ ಬರೆದ ಈ ಚಿತ್ರವು ಆಕ್ಷನ್, ಸಸ್ಪೆನ್ಸ್ ಮತ್ತು ಅನಿರೀಕ್ಷಿತ ತಿರುವುಗಳಿಂದ ತುಂಬಿದ ಒಂದು ರೋಮಾಂಚಕಾರಿ ನಿರೂಪಣೆಯನ್ನು ಭರವಸೆ ನೀಡುತ್ತದೆ. ಬಹು ನಿರೀಕ್ಷಿತ ಮನರಂಜನಾ ಚಿತ್ರ ಜೂನ್ 12 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತಿರುವ ಕನ್ನಡ ಚಲನಚಿತ್ರಗಳು**

**ಉತ್ತರ:** ಉತ್ತರ ಕನ್ನಡ ಸಾಮಾಜಿಕ ನಾಟಕವಾಗಿದ್ದು, ಹಿರಿಯ ಚಲನಚಿತ್ರ ನಿರ್ಮಾಪಕ ದಿನೇಶ್ ಬಾಬು ನಿರ್ದೇಶಿಸಿದ್ದಾರೆ ಮತ್ತು ನಾರಾಯಣ ಸ್ವಾಮಿ, ತಾರಾ, ಅಶ್ವಿನಿ ಗೌಡ ಮತ್ತು ಸಂಪತಿ ಆಳ್ವ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಈ ಕಥೆಯು ಟ್ರಕ್ ಚಾಲಕನೊಬ್ಬನ ವಿಚ್ಛೇದನ ಪ್ರಕರಣವು ಅನಿರೀಕ್ಷಿತ ತಿರುವು ಪಡೆಯುವ ಸುತ್ತ ಸುತ್ತುತ್ತದೆ, ಇದು ಆಧುನಿಕ ಕುಟುಂಬಗಳ ಮೇಲೆ ಪರಿಣಾಮ ಬೀರುವ ಕಾನೂನು ಮತ್ತು ಸಾಮಾಜಿಕ ಸಮಸ್ಯೆಗಳನ್ನು ಎತ್ತಿ ತೋರಿಸುತ್ತದೆ. ಚಿಂತನಶೀಲ ನಾಟಕವು ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಅಭ್ಯಂಜನ:** ದಿನೇಶ್ ಬಾಬೂ ನಿರ್ದೇಶನದ ಅಭ್ಯಂಜನ ಕನ್ನಡ ನಾಟಕವಾಗಿದ್ದು, ನಾರಾಯಣ ಸ್ವಾಮಿ, ಅಪೂರ್ವ ಭಾರದ್ವಾಜ್ ಮತ್ತು ಕರಿ ಸುಬ್ಬು ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಕರ್ನಾಟಕ–ತಮಿಳುನಾಡು ಗಡಿಯಲ್ಲಿ ನೆಲೆಗೊಂಡಿರುವ ಈ ಚಿತ್ರವು, ವಯಸ್ಸಾದ ಪೋಷಕರನ್ನು ನೋಡಿಕೊಳ್ಳುವ ಕುಟುಂಬವು ಎದುರಿಸುವ ನೈತಿಕ ಮತ್ತು ಭಾವನಾತ್ಮಕ ಸವಾಲುಗಳನ್ನು ಪರಿಶೋಧಿಸುತ್ತದೆ, ಇದು ವಿವಾದಾತ್ಮಕ ಅಭ್ಯಾಸವಾದ ತಲೈಕೂತಲ್ ಅನ್ನು ಸ್ಪರ್ಶಿಸುತ್ತದೆ. ಈ ಚಿತ್ರವು ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಮೃತ್ಯುದೇವತೆ:** ಮೃತ್ಯುದೇವತೆ ಕನ್ನಡದ ಅಪರಾಧ ಸಸ್ಪೆನ್ಸ್ ಥ್ರಿಲ್ಲರ್ ಆಗಿದ್ದು, ನವೀನ್ ಮಹಾದೇವ್ ಇ ನಿರ್ದೇಶಿಸಿದ್ದಾರೆ ಮತ್ತು ಮಾಹಿನ್ ಕುಬೇರ್, ಸಾರಿಕಾ ರಾವ್, ದಯಾನಾ ಜೆಸ್ಸಿಕಾ, ಹಿಮಾ ಮೋಹನ್ ಮತ್ತು ವಿನಯಾ ಪ್ರಸಾದ್ ನಟಿಸಿದ್ದಾರೆ. ದೈವಿಕ ನ್ಯಾಯದ ಪರಿಕಲ್ಪನೆಯಿಂದ ಪ್ರೇರಿತವಾದ ಈ ಕಥೆಯು ಕ್ರೂರ ಅಪರಾಧಿಗಳನ್ನು ಎದುರಿಸುವ ಮತ್ತು ದುಷ್ಟತನದ ವಿರುದ್ಧ ಪ್ರತೀಕಾರದ ಸಂಕೇತವಾಗುವ ನಿರ್ಭೀತ ಮಹಿಳೆಯನ್ನು ಅನುಸರಿಸುತ್ತದೆ. ಈ ಥ್ರಿಲ್ಲರ್ ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ.

**ಮದ್ದಾನೆ:** ಮದ್ದಾನೆ ಕನ್ನಡದ ಕ್ರೈಮ್ ಥ್ರಿಲ್ಲರ್ ಆಗಿದ್ದು, ಇದನ್ನು ಕೆ. ರಾಜ್ ಶರಣ್ ನಿರ್ದೇಶಿಸಿದ್ದಾರೆ ಮತ್ತು ಶ್ರೀ ಆಯರ್, ಲತಾ ಮೂರ್ತಿ, ವಿ. ಶ್ರೀನಿವಾಸ್ ಮೂರ್ತಿ ಮತ್ತು ರಾಣಿ ಆರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ.

ಈ ಚಿತ್ರವು ಎಟಿಎಸ್ ಅಧಿಕಾರಿಯೊಬ್ಬರು ಭಯೋತ್ಪಾದನೆ ಮತ್ತು ಡ್ರಗ್ ಮಾಫಿಯಾ ವಿರುದ್ಧ ರಹಸ್ಯವಾಗಿ ಹೋರಾಡುತ್ತಾ ತನ್ನ ಕಷ್ಟದಲ್ಲಿರುವ ಕುಟುಂಬವನ್ನು ಉಳಿಸಲು ಪ್ರಯತ್ನಿಸುವುದನ್ನು ಅನುಸರಿಸುತ್ತದೆ, ಇದು ಆಕ್ಷನ್ ಮತ್ತು ಸಸ್ಪೆನ್ಸ್‌ನ ಹಿಡಿತದ ಮಿಶ್ರಣಕ್ಕೆ ಕಾರಣವಾಗುತ್ತದೆ. ಈ ಚಿತ್ರವು ಜೂನ್ 12, 2026 ರಂದು ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗುತ್ತದೆ.

**ಕ್ಷಮೆಯಿರಲಿ ತಂದೆ:** ಕ್ಷಮೆಯಿರಲಿ ತಂದೆ ಒಂದು ಕನ್ನಡ ಸಸ್ಪೆನ್ಸ್ ಥ್ರಿಲ್ಲರ್ ಸಿನಿಮಾವಾಗಿದ್ದು, ಇದನ್ನು ಮೂಗ್ ಸುರೇಶ್ ನಿರ್ದೇಶಿಸಿದ್ದಾರೆ ಮತ್ತು ವಿನಯ ಶೆಟ್ಟಿ, ಜಗದೀಶ್ ಜಾಲ ಮತ್ತು ಶಿವಕುಮಾರ್ ಆರಾಧ್ಯ ಅವರೊಂದಿಗೆ ನಟಿಸಿದ್ದಾರೆ. ಈ ಕಥೆಯು ಸತ್ತಿದ್ದಾನೆಂದು ಭಾವಿಸಲಾದ ಸರ್ಕಾರಿ ಉದ್ಯೋಗಿಯ ಅನಿರೀಕ್ಷಿತ ಹಿಂತಿರುಗುವಿಕೆಯು ಅವನ ಕುಟುಂಬಕ್ಕೆ ವಂಚನೆ, ಬ್ಲ್ಯಾಕ್‌ಮೇಲ್ ಮತ್ತು ಜೀವನವನ್ನು ಬದಲಾಯಿಸುವ ಪರಿಣಾಮಗಳ ಜಾಲವನ್ನು ಬಹಿರಂಗಪಡಿಸುತ್ತದೆ. ಈ ಥ್ರಿಲ್ಲರ್ ಸಿನಿಮಾ ಜೂನ್ 12, 2026 ರಂದು ಥಿಯೇಟ್ರಿಕಲ್ ಬಿಡುಗಡೆಗೆ ಸಿದ್ಧವಾಗಿದೆ.











# ಲಂಬೋದರ 2.0 ಶೂಟಿಂಗ್ ನೋಡಲು ಬಂದ ವಿದೇಶಿಗರು

ಸಿಂಪಲ್ ಸುನಿ ನಿರ್ದೇಶಿಸುತ್ತಿರುವ ಲಂಬೋದರ 2.0 ಸ್ಯಾಂಡಲ್‌ವುಡ್‌ನಲ್ಲಿ ಅಷ್ಟೇ ಅಲ್ಲ, ಅಂತರರಾಷ್ಟ್ರೀಯ ಮಟ್ಟದಲ್ಲಿ ಸದ್ದು ಮಾಡುವುದಕ್ಕೆ ಹೊರಟಿದೆ. ಈ ಸೈನ್ಸ್–ಫಿಕ್ಷನ್ ಆಕ್ಷನ್ ಶೈಲಿಯ ಸಿನಿಮಾ ಇದಾಗಿದ್ದು, ಗ್ಲೋಬಲ್ ಲೆವೆಲ್‌ನಲ್ಲಿ ಸದ್ದು ಮಾಡುತ್ತಿದೆ. ಇತ್ತೀಚೆಗೆ ವಿದೇಶಿ ತಂಡವೊಂದು ಸುನಿ ಸಿನಿಮಾ ಶೂಟಿಂಗ್ ಸೆಟ್‌ಗೆ ವಿಸಿಟ್ ಹಾಕಿದ್ದಾರೆ.

ಯುನೈಟೆಡ್ ಕಿಂಗ್‌ಡಮ್‌ನ ವೆಸ್ಟ್ ಮಿಡ್ಲ್ಯಾಂಡ್ ಮೇಯರ್ ಕಚೇರಿಯ ಅಧಿಕೃತ ಪ್ರತಿನಿಧಿ ಮಂಡಳಿ ಹಾಗೂ ಇಂಡಿಯಾ ಗ್ಲೋಬಲ್ ಫೋರಂನ ಸದಸ್ಯರು ಲಂಬೋದರ 2.0 ಶೂಟಿಂಗ್ ಸೆಟ್‌ಗೆ ವಿಸಿಟ್ ಹಾಕಿದ್ದಾರೆ. ಕನ್ನಡ ಚಿತ್ರರಂಗದ ಕಾರ್ಯವೈಖರಿಯನ್ನು ಒಂದು ದಿನ ಪೂರ್ಣವಾಗಿ ವೀಕ್ಷಣೆ ಮಾಡಿದ್ದಾರೆ. ಈ ವೇಳೆ ಪ್ರತಿನಿಧಿ ಮಂಡಳಿಯ ಸದಸ್ಯರು ಸಿನಿಮಾದ ಕಲಾವಿದರು ಹಾಗೂ ತಾಂತ್ರಿಕ ತಂಡದೊಂದಿಗೆ ಸಂವಾದ ನಡೆಸಿದ್ದಾರೆ.

ಲಂಬೋದರ 2.0 ಸೈನ್ಸ್–ಫಿಕ್ಷನ್ ಆಕ್ಷನ್ ಸಿನಿಮಾ ಆಗಿದ್ದು, ಚಿತ್ರರಂಗದ ಸಮಕಾಲೀನ ಸಾಮಾಜಿಕ ವಿಷಯಗಳನ್ನು ಮಾಡರ್ನ್ ಟೆಕ್ನಾಲಜಿ ಸೇರಿಸಿ ಲಂಬೋದರ 2.0 ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ. ಈ ಪ್ರಕ್ರಿಯೆಯ ಕುರಿತು ಯುನೈಟೆಡ್ ಕಿಂಗ್‌ಡಮ್‌ನ ವೆಸ್ಟ್ ಮಿಡ್ಲ್ಯಾಂಡ್ ಮೇಯರ್ ಕಚೇರಿಯ ಸದಸ್ಯರು ಮಾಹಿತಿ ಪಡೆದುಕೊಂಡರು.




ಸಿಂಪಲ್ ಸುನಿ ನಿರ್ದೇಶಿಸುತ್ತಿರುವ ಲಂಬೋದರ 2.0 ಸಿನಿಮಾ ಮೂಲಕ ಅನಿಲ್ ಶೆಟ್ಟಿ ಹಾಗೂ ಸಾಚಿ ಬಿಂದ್ರಾ ನಾಯಕ–ನಾಯಕಿಯಾಗಿ ಸ್ಯಾಂಡಲ್‌ವುಡ್‌ಗೆ ಎಂಟ್ರಿ ಕೊಡುತ್ತಿದ್ದಾರೆ. ಖ್ಯಾತ ಬಾಲಿವುಡ್ ನಟ ಕುನಾಲ್ ಕಪೂರ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ತಂತ್ರಜ್ಞಾನ, ಡಿಜಿಟಲ್ ಪ್ರಭಾವ ಹಾಗೂ ಮಾನವನ ಖುಷಿಯ ಹಿನ್ನೆಲೆಯನ್ನು ಇಟ್ಕೊಂಡು ಈ ಕಥೆಯನ್ನು ಹೆಣೆಯಲಾಗಿದೆ. ಸಿಂಪಲ್ ಸುನಿಯ ವಿಶಿಷ್ಟ ಶೈಲಿಯ ನಿರೂಪಣೆಯ ಸಿನಿಮಾ ಆಗಿದ್ದರಿಂದ ಈಗಾಗಲೇ ಸಾಕಷ್ಟು ಕುತೂಹಲ ಹಾಗೂ ಚರ್ಚೆಗೆ ಎಡೆ ಮಾಡಿಕೊಟ್ಟಿದೆ.

ಲಂಬೋದರ 2.0 ಸಿನಿಮಾದ ಪರಿಕಲ್ಪನೆ ಹಾಗೂ ನಿರ್ಮಾಣದ ವೈಖರಿಯನ್ನು ಯುನೈಟೆಡ್ ಕಿಂಗ್ ಡಮ್‌ನ ವೆಸ್ಟ್ ಮಿಡ್ಲ್ಯಾಂಡ್ಸ್ ಮೇಯರ್ ಕಚೇರಿಯ ಅಧಿಕೃತ ಪ್ರತಿನಿಧಿ ಮಂಡಳಿ ಮೆಚ್ಚುಗೆ ವ್ಯಕ್ತಪಡಿಸಿದೆ. ಸಿನಿಮಾದ ಕಲಾವಿದರು ಮತ್ತು ತಾಂತ್ರಿಕ ತಂಡವನ್ನು ಯುನೈಟೆಡ್ ಕಿಂಗ್‌ಡಮ್‌ಗೆ ಆಹ್ವಾನಿಸಿದ್ದು, ಬರ್ಮಿಂಗ್‌ಹ್ಯಾಮ್ ನಗರದಲ್ಲಿ ವಿಶೇಷ ಪ್ರದರ್ಶನ ಏರ್ಪಡಿಸುವ ಆಸಕ್ತಿಯನ್ನು ವ್ಯಕ್ತಪಡಿಸಿತು. ಈ ಭೇಟಿ ಭವಿಷ್ಯದಲ್ಲಿ ಸಾಂಸ್ಕೃತಿಕ ಹಾಗೂ ಚಲನಚಿತ್ರ ಸಹಯೋಗಗಳಿಗೆ ಹೊಸ ಅವಕಾಶಗಳನ್ನು ಸೃಷ್ಟಿಸುವ ಸಾಧ್ಯತೆಯಿದೆ.

ಇಷ್ಟೇ ಅಲ್ಲದೆ, ಯುಕೆ ಪ್ರತಿನಿಧಿ ಮಂಡಳಿಯ ಸದಸ್ಯರು ಈ ಸಿನಿಮಾದ ಕಲಾವಿದರು ಹಾಗೂ ಸೋಶಿಯಲ್ ಮೀಡಿಯಾ ಇನ್ಫ್ಲುಯೆನ್ಸರ್ ಮ್ಯಾಕ್ ಮಾಚಾ, ಛಾಯಾಗ್ರಾಹಕ ಸಂತೋಷ್ ರೈ ಪಾತಾಜೆ, ಕಾರ್ಯನಿರ್ವಾಹಕ ನಿರ್ಮಾಪಕಿ ನಿದಿಶಾ ಸುವರ್ಣ ಜೊತೆಗೆ ಸಿನಿಮಾ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ತಾಂತ್ರಿಕ ತಂಡದ ಸದಸ್ಯರೊಂದಿಗೆ ಸಂವಾದ ನಡೆಸಿದರು.

2026ರಲ್ಲಿ ಸಿಂಪಲ್ ಸುನಿ ನಿರ್ದೇಶಿಸುತ್ತಿರುವ ಲಂಬೋದರ 2.0 ಸಿನಿಮಾ ಬಿಡುಗಡೆಯಾಗಲಿದೆ. ಈ ಸಿನಿಮಾ ಕನ್ನಡ, ಹಿಂದಿ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಗಳಲ್ಲಿ ಬಿಡುಗಡೆಯಾಗಲಿದೆ. ಹೀಗಾಗಿ ಜಾಗತಿಕ ಪ್ರೇಕ್ಷಕರನ್ನು ತಲುಪುವ ಉದ್ದೇಶದಿಂದ ನಿರ್ಮಾಪಕರು ಪ್ರಸ್ತುತ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಿನಿಮಾವನ್ನು ವಿತರಣೆ ಮಾಡುವುದಕ್ಕೆ ಎದುರು ನೋಡುತ್ತಿದ್ದಾರೆ.

ಮಾಸ್ ಪ್ರೊಡಕ್ಷನ್ ಸಂಸ್ಥೆ ಲಂಬೋದರ 2.0 ಸಿನಿಮಾವನ್ನು ನಿರ್ಮಾಣ ಮಾಡುತ್ತಿದೆ. ಕನ್ನಡ ಚಿತ್ರರಂಗದಿಂದ ಹೊರಬರುತ್ತಿರುವ ಅತ್ಯಂತ ಮಹತ್ವಾಕಾಂಕ್ಷೆಯ ಸೈನ್ಸ್–ಫಿಕ್ಷನ್ ಆಕ್ಷನ್ ಥ್ರಿಲ್ಲರ್‌ಗಳಲ್ಲಿ ಈ ಸಿನಿಮಾ ಕೂಡ ಒಂದಾಗಿದೆ.

ವಿಶಿಷ್ಟ ಶೈಲಿಯ ಸಿನಿಮಾ ಮೂಲಕ ವಿಶ್ವದಾದ್ಯಂತದ ಪ್ರೇಕ್ಷಕರೊಂದಿಗೆ ಸಂಪರ್ಕ ಸಾಧಿಸುವ ಗುರಿಯನ್ನು ಈ ಸಿನಿಮಾ ತಂಡದ್ದು. ಸದ್ಯ ಲಂಬೋದರ 2.0 ಸಿನಿಮಾ ಶೂಟಿಂಗ್ ನಡೆಯುತ್ತಿದ್ದು, ರಿಲೀಸ್ ಬಗ್ಗೆ ಮಾಹಿತಿ ಹೊರ ಬೀಳಬೇಕಿದೆ.




# ಜೈಲಿನಲ್ಲಿ ಆತ್ಮಕಥೆ ಬರೆಯಲು ಮುಂದಾದ್ರಾ ಪವಿತ್ರಾ ಗೌಡ? ದರ್ಶನ್ ಕಥೆಯೇನು?



ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಪವಿತ್ರಾ ಗೌಡ ಜೈಲಿನಲ್ಲಿ ಇದ್ದಾರೆ. ಹಲವು ಬಾರಿ ಜಾಮೀನಿಗೆ ಪ್ರಯತ್ನ ಪಟ್ಟಿದ್ದರೂ, ಪವಿತ್ರಾ ಗೌಡಗೆ ಜಾಮೀನು ನೀಡುವುದಕ್ಕೆ ಕೋರ್ಟ್ ನಿರಾಕರಿಸಿತ್ತು. ಹೀಗಾಗಿ ಇತ್ತೀಚೆಗೆ ಮತ್ತೆ ಜಾಮೀನಿಗೆ ಪಯತ್ನ ಪಟ್ಟಿಲ್ಲ. ದರ್ಶನ್ ಜಾಮೀನು ಅರ್ಜಿ ಸುಪ್ರೀಂ ಕೋರ್ಟ್‌ನಲ್ಲಿ ವಜಾ ಆದ ಬಳಿಕ ಪವಿತ್ರಾ ಮತ್ತೆ ಇಂತಹ ಪ್ರಯತ್ನಕ್ಕೆ ಮುಂದಾಗಿಲ್ಲ.

ಇತ್ತ ಬೆಂಗಳೂರಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ನಟ ದರ್ಶನ್ ಹಾಗೂ ಪವಿತ್ರಾ ಗೌಡ ಬಗ್ಗೆ ದಿನಕ್ಕೊಂದು ಸುದ್ದಿ ಹೊರ ಬರುತ್ತಿದೆ. ಕಳೆದ ಕೆಲವು ದಿನಗಳಿಂದ ದರ್ಶನ್ ಸೈಲೆಂಟ್ ಆಗಿ ಇದ್ದರೆ, ಇನ್ನೊಂದು ಕಡೆ ಪವಿತ್ರಾ ಗೌಡ ಕೂಡ ಅದೇ ರೀತಿ ಮೌನ ವಹಿಸಿದ್ದರು. ಈ ಮಧ್ಯೆ ಇಬ್ಬರ ವರ್ತನೆಯಲ್ಲಿ ಭಾರಿ ವ್ಯತ್ಯಾಸ ಕಂಡುಬರುತ್ತಿದೆ ಎಂದು ವರದಿಗಳಾಗಿವೆ.

ಜಾಮೀನು ಪಡೆಯುವ ವಿಚಾರವಾಗಿ ಪವಿತ್ರಾ ಗೌಡ ಸುದ್ದಿಯಾಗುತ್ತಿದ್ದರು. ಆದ್ರೀಗ ಪರಪ್ಪನ ಅಗ್ರಹಾರ ಜೈಲಿನಲ್ಲಿ ಆತ್ಮಚರಿತ್ರೆಯನ್ನು ಬರೆಯುವುದಕ್ಕೆ ಮುಂದಾಗಿದ್ದಾರಂತೆ. ಪವಿತ್ರಾ ಗೌಡ ಆತ್ಮಚರಿತ್ರೆ ಕುರಿತು ಟಿವಿ 9 ಕನ್ನಡ ಮಾಡಿದ ಈ ವರದಿ ಈಗ ಅಚ್ಚರಿಗೆ ಕಾರಣವಾಗಿದೆ. ಒಂದ್ಮೇಲೆ ಆತ್ಮಚರಿತ್ರೆ ಬರೆದರೆ ದರ್ಶನ್ ಕಥೆಯೇನು? ಇದಕ್ಕೆ ದರ್ಶನ್ ಕುಟುಂಬದ ಸಮ್ಮತಿ ಇದೆಯೇ? ತಿಳಿಯುವುದಕ್ಕೆ ಮುಂದೆ ಓದಿ.

ಪವಿತ್ರಾ ಗೌಡ ವಿಭಿನ್ನ ನಡೆ

ಇತ್ತೀಚೆಗೆ ದರ್ಶನ್ ಜಾಮೀನು ಪಡೆಯಲು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು. ಅಲ್ಲಿ ಜಾಮೀನು ಸಿಗಬಹುದೆಂದು ದರ್ಶನ್ ನಿರೀಕ್ಷೆ ಮಾಡಿದ್ದರು. ಇದೇ ಬೆನ್ನಲ್ಲೇ ಪವಿತ್ರಾ ಗೌಡ ಕೂಡ ಜಾಮೀನಿಗೆ ಅರ್ಜಿ ಸಲ್ಲಿಸಬಹುದೆಂಬ ನಿರೀಕ್ಷೆಯಿತ್ತು. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಜಾಮೀನು ತಿರಸ್ಕೃತವಾದ ಬೆನ್ನಲ್ಲೇ ಪವಿತ್ರಾ ಗೌಡ ಕೂಡ ಸೈಲೆಂಟ್ ಆಗಿದ್ದಾರೆ ಅನ್ನೋ ಮಾತು ಕೇಳಿ ಬರುತ್ತಿದೆ. ಇದರ ಹಿಂದೆ ತಮ್ಮ ಆತ್ಮಚರಿತ್ರೆ ಬರೆಯುವುದಕ್ಕೆ ಪವಿತ್ರಾ ಗೌಡ ಮುಂದಾಗಿದ್ದಾರೆ ಅಂತ ಟಿವಿ 9 ಕನ್ನಡ ವರದಿ ಮಾಡಿದೆ.

ಆತ್ಮಕಥೆ ಬರೆಯಲು ಪವಿತ್ರಾ ಗೌಡ ಸಿದ್ಧತೆ?

ರೇಣುಕಾಸ್ವಾಮಿ ಪ್ರಕರಣದ ಮೊದಲ ಆರೋಪಿಯಾಗಿರುವ ಪವಿತ್ರಾ ಗೌಡ ಜೈಲಿನಲ್ಲಿ ಹೊಸ ಹೆಜ್ಜೆ ಇಟ್ಟಿದ್ದಾರೆ ಎನ್ನಲಾಗಿದೆ. ತಮ್ಮ ಬದುಕಿನ ಇದೂವರೆಗಿನ ಏಳು–ಬೀಳುಗಳನ್ನು ಪುಸ್ತಕ ರೂಪದಲ್ಲಿ ಹೊರ ತರುವುದಕ್ಕೆ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಆತ್ಮಕಥೆಯನ್ನು ಬರೆಯುವುದಕ್ಕೆ ನಿರ್ಧರಿಸಿದ್ದಾರೆ ಎಂದು ವರದಿಯಾಗಿದೆ. ಪವಿತ್ರಾ ಗೌಡ ಈ ನಡೆ ದರ್ಶನ್‌ಗೆ ಮತ್ತೊಂದು ತಲೆನೋವಾಗಿ ಪರಿಣಮಿಸಬಹುದು ಎಂದು ಅಂದಾಜಿಸಲಾಗುತ್ತಿದೆ.

ಆತ್ಮಕಥೆಯಲ್ಲಿ ಏನಿರುತ್ತೆ?

ಪವಿತ್ರಾ ಗೌಡ ಆತ್ಮಕಥೆಯಲ್ಲಿ ಅವರ ಬದುಕಿನ ಬಗ್ಗೆ ಏನೇ ಹೇಳಿದರೂ, ಕೆಲವು ಚಾಪ್ಟರ್‌ಗಳಲ್ಲಿ ದರ್ಶನ್ ಜೊತೆಗಿನ ಒಡನಾಟ, ಸ್ನೇಹ, ಅತ್ಮೀಯತೆ ಬಗ್ಗೆ ಉಲ್ಲೇಖ ಮಾಡುತ್ತಾರಾ? ರೇಣುಕಾಸ್ವಾಮಿ ಪ್ರಕರಣದ ಹಿನ್ನೆಲೆಯನ್ನು ಹೇಳಬಹುದಾ? ತಮ್ಮ ಮೇಲಿನ ಆರೋಪಗಳಿಗೆ ಈ ಆತ್ಮಕಥೆಯಲ್ಲಿ ಕ್ಲಾರಿಟಿ ಕೊಡಬಹುದಾ? ಅನ್ನೊ ಪ್ರಶ್ನೆಗಳು ಹುಟ್ಟಿಕೊಂಡಿವೆ. ಒಂದು ವೇಳೆ ಪುಸ್ತಕ ರೂಪದಲ್ಲಿ ಇದೆಲ್ಲ ಅಂಶಗಳು ಹೊರ ಬಂದರೆ ಏನಾಗಬಹುದು? ಅನ್ನೋ ಆತಂಕ ಕೂಡ ಕೆಲವರಲ್ಲಿ ಶುರುವಾಗಿದೆ ಎನ್ನಲಾಗಿದೆ.

ದರ್ಶನ್ ವಿರೋಧಿಸಬಹುದೇ?

ರೇಣುಕಾಸ್ವಾಮಿ ಪ್ರಕರಣದ ಬಳಿಕ ದರ್ಶನ್ ಹಾಗೂ ಪವಿತ್ರಾ ಗೌಡ ನಡುವಿನ ಗೆಳೆತನದಲ್ಲಿ ಬಿರುಕು ಮೂಡಿದೆ ಅಂತ ಈ ಹಿಂದೆ ವರದಿಗಳಾಗಿದ್ದವು. ಹೀಗಾಗಿ ಪವಿತ್ರಾ ಗೌಡ ಈ ನಡೆ ದರ್ಶನ್ ಮುನಿಸಿಗೆ ಕಾರಣವಾಗುವ ಸಾಧ್ಯತೆಯಿದೆ. ಪತ್ನಿ ವಿಜಯಲಕ್ಷ್ಮಿ ದರ್ಶನ್ ಈ ಆತ್ಮಕಥೆಯ ವಿರುದ್ಧ ಕೋರ್ಟ್ ಮೆಟ್ಟಿಲೇರುವ ಸಾಧ್ಯತೆಯಿದೆ. ಆದರೆ, ಪವಿತ್ರಾ ಗೌಡ ಆತ್ಮಕಥೆ ಬರೆಯುವ ಬಗ್ಗೆ ಅಧಿಕೃತ ಮಾಹಿತಿ ಇನ್ನಲೇ ಹೋದರೂ, ಒಂದು ವೇಳೆ ಬರೆದರೆ ಏನಾಗಬಹುದು ಅನ್ನೋ ಕುತೂಹಲ ಈಗ ಎಲ್ಲರಲ್ಲೂ ಮನೆ ಮಾಡಿದೆ.



# ಕಾಂಗ್ರೆಸ್ ಜೊತೆ ಟಿಎಂಸಿ ವಿಲೀನ ವದಂತಿಗೆ ತೆರೆ

• ಪ್ರಜೋದಯ ವರದಿ



**ನವದೆಹಲಿ:** ಪಶ್ಚಿಮ ಬಂಗಾಳದಲ್ಲಿ ಬಂಡಾಯದ ಬೇಗುದಿಯಲ್ಲಿ ಬೇಯುತ್ತಿರುವ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿ ಕಾಂಗ್ರೆಸ್ ಜೊತೆಗೆ ವಿಲೀನದ ಮಾತುಗಳು ಕೇಳಿಬರುತ್ತಿದೆ.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರು, ಇದೆಲ್ಲಾ ಆಧಾರ ರಹಿತ ವದಂತಿಗಳು ಎಂದು ಅಲ್ಲಗಳೆದರು. ಮಮತಾ ಬ್ಯಾನರ್ಜಿ ಮತ್ತು ಅಭಿಷೇಕ್ ಬ್ಯಾನರ್ಜಿ ಇತ್ತೀಚಿಗೆ ದೆಹಲಿಯಲ್ಲಿ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರನ್ನು ಭೇಟಿಯಾಗಿದ್ದರು. ಆದರೆ ಅವರು ಇಂಡಿಯಾ ಬಣದಲ್ಲಿ ಮುಂದುವರೆಯುವ ಕುರಿತು ಚರ್ಚೆ ನಡೆಸಿದ್ದು, ಬೇರೆ ಯಾವುದೇ ವಿಚಾರಚರ್ಚೆಯಾಗಿಲ್ಲವೆಂದು ಸ್ಪಷ್ಟಪಡಿಸಿದರು.

ಮುಂದಿನ 2-3 ತಿಂಗಳುಗಳಲ್ಲಿ ದೇಶಾದ್ಯಂತ ನಾವು ಹೋರಾಟ ನಡೆಸುತ್ತಿವೆ. ರಾಜ್ಯ ಹಾಗು ಜಿಲ್ಲಾ ಮಟ್ಟದಲ್ಲೂ ಪ್ರತಿಭಟನೆ ಮಾಡುತ್ತೇವೆ. ಜನರು ಎಲ್ಲೆಲ್ಲಿ ಕಷ್ಟಗಳನ್ನು ಎದುರಿಸುತ್ತಿದ್ದರೋ ಅಲ್ಲಿ ಕಾಂಗ್ರೆಸ್ ಅವರೊಂದಿಗೆ ಭಾವನೆಗಳನ್ನು ಹಂಚಿಕೊಳ್ಳುತ್ತದೆ ಮತ್ತು ಅವರಿಗಾಗಿ ಹೋರಾಡುತ್ತದೆಂದು ತಿಳಿಸಿದರು.

ಮಧ್ಯಪ್ರದೇಶ ಮತ್ತು ಜಾರ್ಖಂಡ್‌ನಲ್ಲಿ ಸಂಭವಿಸಿದ ಇತ್ತೀಚಿನ ಪರಿಸ್ಥಿತಿ ಪ್ರಜಾಪ್ರಭುತ್ವಕ್ಕೆ ಕಳವಳಕಾರಿಯಾಗಿದೆ. ಯಾವುದೇ ಸಮಸ್ಯೆ ಇಲ್ಲದಿದ್ದರೂ ಮೀನಾಕ್ಷಿ ನಟರಾಜನ್ ಅವರ ನಾಮಪತ್ರವನ್ನು ತಿರಸ್ಕರಿಸಿದ್ದಾರೆ. ಈ ವಿಚಾರದಲ್ಲಿ ಮುಂದಿನ ಹೋರಾಟದ ಕುರಿತು ಚರ್ಚೆ ನಡೆದಿದೆ ಎಂದರು.

ಮೀನಾಕ್ಷಿ ನಟರಾಜನ್ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣ, ಎಫ್‌ಐಆರ್ ಅಥವಾ ಚಾರ್ಜ್‌ಶೀಟ್ ಇರಲಿಲ್ಲ. ಆದಾಗ್ಯೂ ಅವರ ನಾಮಪತ್ರವನ್ನು ತಿರಸ್ಕರಿಸಲಾಗಿದೆ. ಮತ್ತೊಂದೆಡೆ ಕಾಲಂನಲ್ಲಿ ತನ್ನ ಹೆಸರನ್ನು ಸರಿಯಾಗಿ ಉಲ್ಲೇಖಿಸದ ಬಿಜೆಪಿ ಬೆಂಬಲಿತ ಕಾರ್ಪೊರೇಟ್ ಅಭ್ಯರ್ಥಿಯ ನಾಮಪತ್ರವನ್ನು ಜಾರ್ಖಂಡ್‌ನಲ್ಲಿ ಚುನಾವಣಾಧಿಕಾರಿ ಅಂಗೀಕರಿಸಿದ್ದಾರೆ. ಇದು ಪ್ರಜಾಪ್ರಭುತ್ವದ ದಯನೀಯ ಸ್ಥಿತಿಯನ್ನು ತೋರಿಸುತ್ತದೆಂದರು.

**ನಿಷ್ಠೆ ಪುನರುಚ್ಚರಿಸಿದ ಸಿನ್ಹಾ**

ಪ್ರಧಾನಿ ನರೇಂದ್ರ ಮೋದಿ ಅವರನ್ನು ಹೊಗಳಿದ ತೃಣಮೂಲ ಕಾಂಗ್ರೆಸ್ ಸಂಸದ ಶತ್ರುಘ್ನ ಸಿನ್ಹಾ, ನಂತರ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿಗೆ ತಮ್ಮ ನಿಷ್ಠೆಯನ್ನು ಪುನರುಚ್ಚರಿಸಿದ್ದಾರೆ. ಟಿಎಂಸಿಯೊಳಗಿನ ಬಂಡಾಯ ಬಣವನ್ನು ಸೇರುತ್ತಿದ್ದಾರೆಂಬ ಆರೋಪಗಳನ್ನು ಅವರು ಅಲ್ಲಗಳೆದಿದ್ದಾರೆ.

ನನ್ನ ಬಗ್ಗೆ ತುಂಬಾ ಹೇಳಲಾಗಿದೆ. ಕೆಲವರು ನಾನು ಬಂಡಾಯ ಗುಂಪಿನ ಭಾಗ ಎಂದು ಹೇಳುತ್ತಿದ್ದಾರೆ. ಇದೆಲ್ಲವೂ ನಿಜವಲ್ಲ. ಎಂದಿಗೂ ಮಮತಾ ಬ್ಯಾನರ್ಜಿ ಅವರ ಕೈ ಬಿಡುವುದಿಲ್ಲ ಎಂದು ಅಸನ್ಸೋಲ್ ಸಂಸದ ಸ್ಪಷ್ಟಪಡಿಸಿದರು.

ಕಷ್ಟದ ಸಮಯದಲ್ಲಿ ಮಮತಾ ಬ್ಯಾನರ್ಜಿ ನನ್ನೊಂದಿಗೆ ನಿಂತರು. ಕಠಿಣ ಸಮಯದಲ್ಲಿ ನಾನು ಅವರ ಜೊತೆಗೆ ನಿಲ್ಲುತ್ತೇನೆ. ಟಿಎಂಸಿ ಮುಖ್ಯಸ್ಥರ ಒತ್ತಾಯದ ಮೇರೆಗೆ ಅಸನ್ಸೋಲ್‌ನಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾಗಿ ಹೇಳಿದ ಸಿನ್ಹಾ, ದೀದಿಯನ್ನು ಎಂದಿಗೂ ಬಿಟ್ಟುಕೊಡುವುದಿಲ್ಲವೆಂದರು.

ಶತ್ರುಘ್ನ ಸಿನ್ಹಾ ತಮ್ಮ ರಾಜಕೀಯ ಜೀವನವನ್ನು ಬಿಜೆಪಿಯೊಂದಿಗೆ ಪ್ರಾರಂಭಿಸಿದರು. ಪ್ರಮುಖ ಬಿಜೆಪಿ ನಾಯಕ ಮತ್ತು ಮಾಜಿ ಕೇಂದ್ರ ಸಚಿವರಾಗಿ ದಶಕಗಳ ಕಾಲ ಸೇವೆ ಸಲ್ಲಿಸಿದ ನಂತರ, ಅವರು ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಂದಾಗಿ ಪಕ್ಷವನ್ನು ತೊರೆದರು. ಅವರು 2019ರ ಲೋಕಸಭಾ ಚುನಾವಣೆಯಲ್ಲಿ ಪಾಟ್ನಾ ಸಾಹಿಬ್‌ನಿಂದ ಕಾಂಗ್ರೆಸ್ ಟಿಕೆಟ್‌ನಲ್ಲಿ ಸ್ಪರ್ಧಿಸಿ ಸೋತರು. 2022ರಲ್ಲಿ ಮಮತಾ ಬ್ಯಾನರ್ಜಿಯವರ ತೃಣಮೂಲ ಕಾಂಗ್ರೆಸ್ ಸೇರಿದರು ಮತ್ತು ಅಸನ್ಸೋಲ್ ಲೋಕಸಭಾ ಉಪಚುನಾವಣೆಯಲ್ಲಿಯಶಸ್ವಿಯಾಗಿ ಗೆದ್ದರು. ಅವರು 2024ರಲ್ಲಿ ಟಿಎಂಸಿ ಅಭ್ಯರ್ಥಿಯಾಗಿ ಅಸನ್ಸೋಲ್ ಸ್ಥಾನ ಉಳಿಸಿಕೊಂಡರು.



**ಹಾಸನ: ರಾಜ್ಯ ಸಚಿವ ಸಂಪುಟದಲ್ಲಿ ಶಾಸಕ ಜಮೀರ್ ಅಹ್ಮದ್ ಖಾನ್ ಅವರಿಗೆ ಉಪ ಮುಖ್ಯಮಂತ್ರಿ ಮತ್ತು ಸಚಿವ ಸ್ಥಾನ ಹಾಗು ಮುಸ್ಲಿಂ ಸಮುದಾಯದ ನಾಲ್ವರು ಶಾಸಕರಿಗೆ ಪ್ರಾಧಾನ್ಯತೆ ನೀಡಬೇಕೆಂದು ಆಗ್ರಹಿಸಿ ಗುರುವಾರ ರಾತ್ರಿ ನಗರದಲ್ಲಿ ಎಪಿಜೆ ಅಬ್ದುಲ್ ಕಲಾಂ ಸಂಘಟನೆಯಿಂದ ಪಂಜಿನ ಮೆರವಣಿಗೆ ನಡೆಸಲಾಯಿತು.**

## ಸೇವೆಯ ಮನಸ್ಸಿದ್ದರೆ ಅವಕಾಶ ಸ್ವಯಂ ಸೃಷ್ಟಿ

» ಮೊದಲನೇ ಪುಟದಿಂದ

ಮೂಲಕ ಸಮಾಜಕ್ಕೆ ಕೊಡುಗೆ ನೀಡುತ್ತಿದೆ. ಮಹಾಲಕ್ಷ್ಮಿ ಮಂಜಪ್ಪ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯವರು ಸಂಚಾರಿ ವಾಹನ ಕಲ್ಪಿಸಿರುವುದು ಹೆಮ್ಮೆಯ ವಿಷಯ. ಜೂನ್ 15ರಿಂದ ವಾಹನ ಹಳ್ಳಿಗಳಿಗೆ ತೆರಳಲಿದ್ದು, ಆರಂಭಿಕವಾಗಿ 8 ಗ್ರಾಮ ಪಂಚಾಯಿತಿಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದರು.

**25 ಕೋ.ರೂ. ಅನುದಾನ**

ಸಾಲುಮರದ ತಿಮ್ಮಕ್ಕ ಅವರು ಹಳೇಬೀಡು ಪುಷ್ಪಗಿರಿ ಮಠದಲ್ಲಿ ವಾಸ್ತವ್ಯ ಹೂಡಿದ್ದರೆಂಬ ವಿಚಾರವನ್ನು ಜಿಲ್ಲಾಧಿಕಾರಿಗೆ ತಿಳಿಸಿದಾಗ ಅವರ ಸ್ಮರಣಾರ್ಥ ಸ್ಮಾರಕ ನಿರ್ಮಾಣಕ್ಕೆ ಕ್ರಮ ಕೈಗೊಂಡಿದ್ದಾರೆ. 10 ಎಕರೆ ಜಾಗವನ್ನು ಮೀಸಲಿಟ್ಟಿದ್ದು 25 ಕೋ.ರೂ. ಅನುದಾನ ನೀಡಲು ಒಪ್ಪಿದ್ದಾರೆ. ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರೊಂದಿಗೆ ಸಹ ಚರ್ಚಿಸಿದ್ದಾರೆ. ಹಳೇಬೀಡಿನಲ್ಲಿ ಗೋಶಾಲೆ ಆರಂಭಿಸಿದ್ದು, ಪಶು ಸಂಗೋಪನಾ ಇಲಾಖೆಯು ಅದನ್ನು ಮಠದ ಸಂಸ್ಥೆಗೆ ಹಸ್ತಾಂತರಿಸಬೇಕಿದೆ. ಆ ನಿಟ್ಟಿನಲ್ಲಿ ಜಿಲ್ಲಾಧಿಕಾರಿ ಕ್ರಮ ವಹಿಸಬೇಕೆಂದು ಕೋರಿದರು.

ಬೇಲೂರು ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಪುಷ್ಪಗಿರಿ ಮಠ ಆರೋಗ್ಯ, ಶಿಕ್ಷಣ, ಕೃಷಿ ಕ್ಷೇತ್ರದ ಏಳಿಗೆಗೆ ಹಲವಾರು ಕಾರ್ಯಕ್ರಮ ಹಮ್ಮಿಕೊಂಡಿದೆ. ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಅವರು ಆಗಮಿಸಿರುವುದು ಖುಷಿಯ ವಿಚಾರ. ಬೇರೆ ಬೇರೆ ಮಠಾಧಿಪತಿಗಳು ಒಟ್ಟಾಗಿ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿದರೆ ಬಡವರಿಗೆ ಅನುಕೂಲವಾಗುತ್ತದೆಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಮಾತನಾಡಿದರು. ಆದಿಚುಂಚನಗಿರಿ ಶೃಂಗೇರಿ ಶಾಖಾ ಮಠದ ಶ್ರೀ ಗುಣನಾಥ ಸ್ವಾಮೀಜಿ, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಜೆ.ಆರ್.ಕೆಂಚೇಗೌಡ, ಮಹಾಲಕ್ಷ್ಮಿ ಮಂಜಪ್ಪ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ ಮುಖ್ಯಸ್ಥ ಡಾ|| ಉಮೇಶ್, ರಚನಾ, ಮನುಕುಮಾರ್, ಕರ್ನಾಟಕ ಕಾಫಿ ಕಾರ್ಪೋರೇಷನ್ ಯೋಜನೆ ಸಂಯೋಜಕ ಯೋಗಾನಂದ ಜಾನೆಕೆರೆ, ಪತ್ರಕರ್ತರ ಸಂಘದ ಮಾಜಿ ಜಿಲ್ಲಾಧ್ಯಕ್ಷ ರವಿ ನಾಕಲಗೂಡು, ಕಟ್ಟಾಯ ಶಿವಕುಮಾರ್, ಮಮತಾ ಪಾಟೀಲ್ ಮತ್ತಿತರರಿದ್ದರು. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಹೆಚ್.ಬಿ.ಮದನಗೌಡ ಸ್ವಾಗತಿಸಿದರು.



## ಗಾಯಕಿ ಶಿವಶ್ರೀಗೆ ಉಸ್ತಾದ್ ಬಿಸ್ಮಿಲ್ಲಾ ಖಾನ್ ಪ್ರಶಸ್ತಿ

• ಪ್ರಜೋದಯ ವರದಿ



**ಬೆಂಗಳೂರು:** ಗಾಯಕಿ, ಸಂಸದ ತೇಜಸ್ವಿ ಸೂರ್ಯ ಅವರ ಪತ್ನಿ ಶಿವಶ್ರೀ ಸ್ಕಂದ ಪ್ರಸಾದ್ ಅವರು, ಸಂಗೀತ ನಾಟಕ ಅಕಾಡೆಮಿ ಕೊಡುವ 2025ನೇ ಸಾಲಿನ ಪ್ರತಿಷ್ಠಿತ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರಕ್ಕೆ ಆಯ್ಕೆಯಾಗಿದ್ದಾರೆ.

ಸಂಗೀತ, ನೃತ್ಯ ಸೇರಿ ವಿವಿಧ ಕಲೆಯಲ್ಲಿ ಸೇವೆ ಸಲ್ಲಿಸುವ ಯುವ ಕಲಾವಿದರಿಗೆ, ಭಾರತ ರತ್ನ ಉಸ್ತಾದ್ ಬಿಸ್ಮಿಲ್ಲಾ ಖಾನ್ ಅವರ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತದೆ. ಶಿವಶ್ರೀ ಅವರು ಸಂಗೀತ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದ್ದಾರೆ. ಕರ್ನಾಟಕ ಸಂಗೀತ, ಭಜನೆ ಸೇರಿ ಭಕ್ತಿಗೀತೆಗಳನ್ನು ಭಾವಪೂರ್ಣವಾಗಿ ಹಾಡುತ್ತಾರೆ. ಅವರ ಈ ಸಾಧನೆಗೆ ಸಂಗೀತ ವಿಭಾಗದಲ್ಲಿ ಪುರಸ್ಕಾರ ಸಂದಿದೆ.

1952ರಿಂದ ಅಕಾಡೆಮಿ ಈ ಪ್ರಶಸ್ತಿಗಳನ್ನು ನೀಡುತ್ತಾ ಬಂದಿದೆ. ಈ ಪುರಸ್ಕಾರದಲ್ಲಿ ಅಕಾಡೆಮಿಯ ಫೆಲೋಶಿಪ್ 3 ಲಕ್ಷ, ಅಕಾಡೆಮಿ ಪ್ರಶಸ್ತಿಯಾಗಿ 1 ಲಕ್ಷ ಮತ್ತು ಇದರ ಜೊತೆಗೆ ಉಸ್ತಾದ್ ಬಿಸ್ಮಿಲ್ಲಾ ಖಾನ್ ಯುವ ಪುರಸ್ಕಾರವು 25,000 ಬಹು ಮಾನ, ತಾಮ್ರಪತ್ರ, ಅಂಗವಸ್ತ್ರವನ್ನು ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

## ಯುದ್ಧ ಯುಗವಲ್ಲ: ಭಯೋತ್ಪಾದನೆಯ ವಿರುದ್ಧ ಶೂನ್ಯ ಸಹಿಷ್ಣುತೆಗೆ ಆಗ್ರಹ

• ಪ್ರಜೋದಯ ವರದಿ

**ಸೋಫಿಯಾ:** ವಿಶ್ವದ ವಿವಿಧೆಡೆ ನಡೆಯುತ್ತಿರುವ ಸಂಘರ್ಷವನ್ನು ಕೊನೆಗೊಳಿಸಲು ಮಾತುಕತೆ ಹಾಗೂ ರಾಜತಾಂತ್ರಿಕ ಮಾರ್ಗವೇ ಏಕೈಕ ಪರಿಹಾರವಾಗಿದೆ ಎಂದು ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ತಿಳಿಸಿದ್ದಾರೆ.

ಬಲ್ಗೇರಿಯಾದ ವಿದೇಶಾಂಗ ಸಚಿವೆ ವೆಲಿಸ್ಲಾವಾ ಪೆಟ್ರೋವಾ ಅವರ ಜೊತೆ ಮಾತುಕತೆ ನಡೆಸಿದ ಬಳಿಕ ಈ ಹೇಳಿಕೆ ನೀಡಿದ್ದಾರೆ. ಇತ್ತೀಚಿಗಿನ ಹಲವು ಸಂಘರ್ಷದ ಬಳಿಕ ಇಡೀ ಜಗತ್ತು ಅನಿಶ್ಚಿತತೆ ಹಾಗೂ ಅಸ್ಥಿರ ಭವಿಷ್ಯದ ಮೂಲಕ ಹಾದುಹೋಗುತ್ತಿದೆ. ಆರ್ಥಿಕ ಭದ್ರತೆ, ಸಾಂಕ್ರಮಿಕ ರೋಗದ ಅನುಭವಗಳು ಹಾಗೂ ಭಯೋತ್ಪಾದನೆಯ ಪುನಾರವರ್ತಿತ ಬೆದರಿಕೆಯೂಸೇರಿದೆ. ಭಾರತವೂ ಈ ವಿಚಾರದಲ್ಲಿ ಸ್ಪಷ್ಟ ನಿಲುವು ಹೊಂದಿದೆ. ಇದು ಯುದ್ಧದ ಯುಗವಲ್ಲ. ಯಾವುದೇ ಸಂಘರ್ಷವನ್ನು ಮಾತುಕತೆ ಹಾಗೂರಾಜ ತಾಂತ್ರಿಕ ಮಾರ್ಗದ ಮೂಲಕ ಬಗೆಹರಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

## ಎಸ್‌ಎಂಕೆ ಬಡಾವಣೆಯಲ್ಲಿ ಮೂಲಸೌಕರ್ಯದ ಕೊರತೆ

### ನೀರು, ವಿದ್ಯುತ್, ಚರಂಡಿ, ಕಸ ವಿಲೇವಾರಿ ಸಮಸ್ಯೆಯೊಂದಿಗೆ ಚಿರತೆ ಭೀತಿ

• ಪ್ರಜೋದಯ ವರದಿ




**ಹಾಸನ:** ನಗರದ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ ಎಂದು ನಿವಾಸಿ ಬಿ.ಆರ್.ಬೊಮ್ಮೇಗೌಡ ಅವರು ಆರೋಪಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಡಾವಣೆಯಲ್ಲಿ ಕುಡಿಯುವ ನೀರು, ವಿದ್ಯುತ್, ಚರಂಡಿ, ಕಸ ವಿಲೇವಾರಿ ಮತ್ತು ಸ್ವಚ್ಛತೆಯಂತಹ ಮೂಲಭೂತ ಸಮಸ್ಯೆ ಕಾಡುತ್ತಿರುವ ಜೊತೆಗೆ ಚಿರತೆ ಮೊದಲಾದ ಕಾಡುಪ್ರಾಣಿಗಳ ಭೀತಿಯೂ ಹೆಚ್ಚಾಗಿದೆ. ಬಡಾವಣೆಯಲ್ಲಿ ಹಲವು ಖಾಲಿ ನಿವೇಶನಗಳಲ್ಲಿ ಗಿಡಗಂಟಿಗಳು ದಟ್ಟವಾಗಿ ಬೆಳೆದಿದ್ದು, ವಿಷಕಾರಿ ಹಾವು, ಚೇಳು ಹಾಗು ಇತರೆ ಕಾಡು ಪ್ರಾಣಿಗಳಿಗೆ ಆಶ್ರಯ ತಾಣವಾಗಿ ಮಾರ್ಪಟ್ಟಿವೆ. ನಿವೇಶನ ಮಾಲೀಕರು ಜಾಗಗಳನ್ನು ಸ್ವಚ್ಛಗೊಳಿಸದಿರುವುದರಿಂದ ಸಾರ್ವಜನಿಕ ಸುರಕ್ಷತೆಗೆ ಕುತ್ತು ಬಂದಿದೆ, ಇನ್ನಾದರೂ ನಿವಾಸಿಗಳು ತಮ್ಮ ಖಾಲಿ ನಿವೇಶನ ಸ್ವಚ್ಛ ಮಾಡಿಕೊಳ್ಳಬೇಕೆಂದು ವಿನಂತಿಸಿದರು.

ನೀರು-ವಿದ್ಯುತ್ ವ್ಯತ್ಯಯ, ಚರಂಡಿ ತುಂಬಿ ರಸ್ತೆ ಮೇಲೆಯೇ ಕೊಳಚೆ ಹಾಗು ಮಳೆ ನೀರು ಹರಿಯುವ ಸ್ಥಿತಿ ನಿರ್ಮಾಣವಾಗಿದೆ. ಪೈಪ್‌ಲೈನ್ ಹಾಗು ಭೂಗತ ವಿದ್ಯುತ್ ಕೇಬಲ್‌ಗಳು ಹಾನಿಗೊಂಡ ಪರಿಣಾಮ ಕುಡಿಯುವ ನೀರು ಮತ್ತು ವಿದ್ಯುತ್ ಸರಬರಾಜಿನಲ್ಲಿ ನಿರಂತರ ವ್ಯತ್ಯಯ ಉಂಟಾಗುತ್ತಿದೆ. ಚರಂಡಿಗಳಲ್ಲಿ ಮಣ್ಣು, ಕಸ ತುಂಬಿಕೊಂಡು ನೀರು ಸರಾಗವಾಗಿ ಹರಿಯದೆ ರಸ್ತೆಗಳ ಮೇಲೆ ತ್ಯಾಜ್ಯ ನೀರು ನಿಲ್ಲುತ್ತಿದೆ. ಮಳೆಗಾಲ ಆರಂಭವಾಗಿರುವ ಕಾರಣ ಸಾಂಕ್ರಾಮಿಕ ರೋಗಗಳ ಭೀತಿ ಹೆಚ್ಚಾಗಿದೆ. ಹೀಗಿದ್ದರೂ, ಮಹಾನಗರಪಾಲಿಕೆ ಅಥವಾ ಹುಡಾ ಅಧಿಕಾರಿಗಳು ಬಂದು ನೋಡಿಲ್ಲ, ಎಷ್ಟೋ ದಿನ ಪೈಪ್‌ಲೈನ್ ಸರಿ ಇಲ್ಲದೆ, ಖಾಯಂ ವಿದ್ಯುತ್ ಇಲ್ಲದೆ ವಾರಗಟ್ಟಲೆ ನೀರಿಲ್ಲದೆ ತೊಂದರೆ ಅನುಭವಿಸಿದ್ದೇವೆಂದು ದೂರಿದರು.

ಕೃಷ್ಣನಗರ ನಿವಾಸಿಗಳಾದ ಮನು, ಅಶೋಕ್, ಶ್ರೀನಿವಾಸ್, ಮಂಜುನಾಥ್, ದೇವೇಗೌಡ ಇದ್ದರು.

## ಕೆಪಿಎಸ್ ಮ್ಯಾಗ್ನೆಟ್ ಶಾಲೆಗೆ ಮಲೆನಾಡು ಭಾಗ ಪರಿಗಣಿಸಬೇಡಿ

• ಪ್ರಜೋದಯ ವರದಿ



**ಸಕಲೇಶಪುರ:** ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳಿಗೆ ಮಲೆನಾಡು ಭಾಗದ ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸುವ ಪ್ರಕ್ರಿಯೆಯಿಂದ ಸರ್ಕಾರ ಹಿಂದೆ ಸರಿಯಬೇಕೆಂದು ಶಾಸಕ ಸಿಮೆಂಟ್ ಮಂಜು ಅವರು ಆಗ್ರಹಿಸಿದರು.

ಪಟ್ಟಣದ ಕುಡುಗರಹಳ್ಳಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ನೂತನ ರಂಗಮಂದಿರ ನಿರ್ಮಾಣಕ್ಕೆ ಭೂಮಿಪೂಜೆ ಹಾಗು ಶೌಚಾಲಯ ಉದ್ಘಾಟಿಸಿ ಮಾತನಾಡಿದ ಅವರು, ಮಲೆನಾಡು ಭಾಗದ ಸಣ್ಣ ಸರ್ಕಾರಿ ಶಾಲೆಗಳನ್ನು ಕೆಪಿಎಸ್‌ಗೆ ವಿಲೀನಗೊಳಿಸಿದರೆ ವಿದ್ಯಾರ್ಥಿಗಳು ಪ್ರತಿದಿನ 4 ರಿಂದ 5 ಕಿ.ಮೀ. ದೂರ ಪ್ರಯಾಣಿಸಬೇಕಾಗುತ್ತದೆ. ಇದು ಮಕ್ಕಳ ಸುರಕ್ಷತೆಗೆ ಸವಾಲಾಗುವುದರ ಜೊತೆಗೆ ಗ್ರಾಮೀಣ ಶಿಕ್ಷಣದ ಮೇಲೂ ದುಷ್ಪರಿಣಾಮ ಬೀರುತ್ತದೆಂದರು.

ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳ ಸ್ಥಾಪನೆಗೆ ಸರ್ಕಾರ ಮುಂದಾಗುವುದಾದರೆ ಮೊದಲು ಸ್ಥಳೀಯ ಪರಿಸ್ಥಿತಿ, ಶಾಲೆಗಳ ಅಗತ್ಯತೆ ಹಾಗು ವಿದ್ಯಾರ್ಥಿಗಳ ಸಂಖ್ಯೆಯನ್ನು ಸಮಗ್ರವಾಗಿ ಪರಿಶೀಲಿಸಬೇಕು. ಜೊತೆಗೆ ಸ್ಥಳೀಯ ಜನಪ್ರತಿನಿಧಿಗಳು, ಪೋಷಕರು ಮತ್ತು ಸಾರ್ವಜನಿಕರ ಅಭಿಪ್ರಾಯ ಪಡೆದು ಮುಂದಿನ ನಿರ್ಧಾರ ಕೈಗೊಳ್ಳಬೇಕೆಂದು ಸಲಹೆ ನೀಡಿದರು.

ವಿದ್ಯಾರ್ಥಿಗಳನ್ನು ಕೆಪಿಎಸ್ ಶಾಲೆಗೆ ಸೇರಿಸುವ ವಿಚಾರವನ್ನು ಪೋಷಕರ ಇಚ್ಛೆಗೆ ಬಿಡುವುದು ಸೂಕ್ತ. ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶಕ್ಕೆ ನಾವು ವಿರೋಧಿಗಳಲ್ಲ. ಆದರೆ ಈಗಿರುವ ಸರ್ಕಾರಿ ಶಾಲೆಗಳಿಗೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ, ಅವುಗಳನ್ನು ಬಲಪಡಿಸಿದ ಬಳಿಕ ಕೆಪಿಎಸ್ ಶಾಲೆಗಳ ಸ್ಥಾಪನೆಗೆ ನನ್ನ ಬೆಂಬಲವಿದೆ ಎಂದು ಹೇಳಿದರು.

ಸರ್ಕಾರಿ ಶಾಲೆಗಳನ್ನು ವಿಲೀನಗೊಳಿಸಿದ ಬಳಿಕ ಅವುಗಳ ಜಮೀನು ಹಾಗೂ ಆಸ್ತಿಪಾಸ್ತಿ ಯನ್ನು ಸಂರಕ್ಷಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ತಮ್ಮ ಕ್ಷೇತ್ರದಲ್ಲಿ ಸರ್ಕಾರಿ ಜಾಗ ರಕ್ಷಣೆಗೆ ಬದ್ಧವಾಗಿ ಕಾರ್ಯ ನಿರ್ವಹಿಸುವುದಾಗಿ ಶಾಸಕರು ತಿಳಿಸಿದರು.

ಎಸ್‌ಡಿಎಂಸಿ ಅಧ್ಯಕ್ಷ ಅಶ್ರಫ್ ಅವರು ಮಾತನಾಡಿ, ಈ ಶಾಲೆಯ ಅಭಿವೃದ್ಧಿಗೆ ಶಾಸಕರು ಈಗಾಗಲೇ ಹಲವು ಕೊಡುಗೆ ನೀಡಿದ್ದಾರೆ. ಶಾಲೆ ಆರಂಭವಾದ 24 ವರ್ಷಗಳಲ್ಲಿ ಕೇವಲ ಎರಡು ಬಾರಿ ಭೂಮಿಪೂಜೆ ನಡೆದಿದ್ದು, ಶಿಕ್ಷಕರು ಹಾಗೂ ಎಸ್‌ಡಿಎಂಸಿ ಸದಸ್ಯರಿಗೆ ಶಾಸಕರು ನೀಡುತ್ತಿರುವ ಗೌರವ ಶ್ಲಾಘನೀಯ ಎಂದು ಹೇಳಿದರು.

ಪುರಸಭೆ ಮುಖ್ಯಾಧಿಕಾರಿ ಮಹೇಶ್ವರಪ್ಪ, ತಾಲ್ಲೂಕು ದೈಹಿಕ ಪರಿವೀಕ್ಷಕ ಖುಶವಂತ್, ಬಿಜೆಪಿ ಮಾಜಿ ಪುರ ಸಭಾ ಸದಸ್ಯ ಪ್ರದೀಪ್, ಬಿಜೆಪಿ ಮುಖಂಡ ಸುದೀಶ್, ಎಸ್‌ಡಿಎಂಸಿ ಅಧ್ಯಕ್ಷ ಅಶ್ರಫ್, ಗ್ರಾಮಸ್ಥರಾದ ವೆಂಕಟೇಶ್, ಸುಲೇಮಾನ್ ಇತರರಿದ್ದರು.

## ವ್ಯಕ್ತಿಗೆ 9.95 ಲಕ್ಷ ರೂ. ವಂಚನೆ

• ಪ್ರಜೋದಯ ವರದಿ

**ಹಾಸನ:** ಅಪರಿಚಿತ ಆ್ಯಪ್ ಡೌನ್‌ಲೋಡ್ ಮಾಡಿಕೊಂಡ ಪರಿಣಾಮ ವ್ಯಕ್ತಿಯೊಬ್ಬರಿಗೆ 9.95 ಲಕ್ಷ ರೂ. ಪಂಗನಾಮ ಹಾಕಲಾಗಿದೆ.

ಶಾಂತಿನಗರದ ಲಕ್ಷ್ಮಿಪತಿ ಹಣ ಕಳೆದುಕೊಂಡವರು. ಅವರು ಕೆನರಾ ಬ್ಯಾಂಕ್ ಎಂಸಿಇ ಕಾಲೇಜು ಶಾಖೆಯಲ್ಲಿ ಉಳಿತಾಯ ಖಾತೆ ಹೊಂದಿದ್ದಾರೆ. ಜೂನ್ 1ರ ಸಂಜೆ 6 ಗಂಟೆ ಸಮಯದಲ್ಲಿ ವಾಟ್ಸ್ ಆ್ಯಪ್ ಗ್ರೂಪ್‌ಗೆ ಪೇಮೆಂಟ್ ಸೆಕ್ಯೂರ್ ಆ್ಯಪ್ ಬಂದಿದ್ದು ಅದರ ಪೂರ್ವಾಪರ ತಿಳಿಯದೆ ಲಕ್ಷ್ಮಿಪತಿ ಡೌನ್‌ಲೋಡ್ ಮಾಡಿದ್ದಾರೆ. ಆ ತಕ್ಷಣವೇ ಅವರ ಖಾತೆಯಿಂದ 5 ಲಕ್ಷ ರೂ. ಡ್ರಾ ಆಗಿದೆ. ಮತ್ತೆ ಕೆಲವೇ ನಿಮಿಷಗಳಲ್ಲಿ 4,95,301 ರೂ. ಕಡಿತವಾಗಿರುವ ಸಂದೇಶ ಬಂದಿದೆ. ಮಾರನೇ ದಿನ ಬ್ಯಾಂಕ್‌ನಲ್ಲಿ ಪರಿಶೀಲಿಸಿದಾಗ ಅಪರಿಚಿತ ಬ್ಯಾಂಕ್ ಖಾತೆಗೆ ಹಣ ವರ್ಗವಾಗಿರುವ ವಿಷಯ ತಿಳಿದಿದೆ. ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಕನ್ನಡ ಉಳಿವಿಗೆ ಪ್ರತಿಯೊಬ್ಬರ ಕೊಡುಗೆ ಅವಶ್ಯ

• ಪ್ರಜೋದಯ ವರದಿ



**ಚನ್ನರಾಯಪಟ್ಟಣ:** ನೆಲ, ಜಲ ಹಾಗು ಭಾಷೆಗೆ ಸಮಸ್ಯೆ ಎದುರಾದಾಗ ಎಲ್ಲರೂ ಒಟ್ಟಾಗಿ ಹೋರಾಟ ಮಾಡಬೇಕು. ಕನ್ನಡಕ್ಕಾಗಿ ಪ್ರತಿಯೊಬ್ಬರು ಕೈ ಎತ್ತಬೇಕೆಂದು ಕರ್ನಾಟಕ ರಕ್ಷಣಾ ವೇದಿಕೆ ತಾಲ್ಲೂಕು ಅಧ್ಯಕ್ಷ ಕರಡೇವು ಮಧು ಅವರು ಹೇಳಿದರು.

ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರವೇ ತಾಲ್ಲೂಕು ಘಟಕದ ವತಿಯಿಂದ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಅವರ 60ನೇ ಜನ್ಮದಿನದ ಅಂಗವಾಗಿ ರೋಗಿಗಳಿಗೆ ಹಾಲು, ಬ್ರೆಡ್ ಹಾಗು ಹಣ್ಣು-ಹಂಪಲು ವಿತರಿಸಿ ಮಾತನಾಡಿದ ಅವರು, ಕನ್ನಡ ಕೇವಲ ಭಾಷೆಯಲ್ಲ ನಾಡಿನ ಸಂಸ್ಕೃತಿ ಎಂದರು.

ನಾಡಿನ ಮಣ್ಣು ಹಾಗು ಭಾಷೆಗೆ ತೊಂದರೆಯಾದರೆ ಪರಿಹಾರ ಸಿಗುವವರೆಗೆ ಹೋರಾಟ ನಿಲ್ಲಬಾರದು ಎಂಬುದೇ ನಮ್ಮ ಉದ್ದೇಶವಾಗಿದೆ. ಅದಕ್ಕೆ ಪೂರಕವಾಗಿ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ ಕೆಲಸ ಮಾಡುತ್ತಿದ್ದಾರೆ. ಕನ್ನಡ ಭಾಷೆಗೆ ತನ್ನದೇಯಾದ ಐತಿಹಾಸಿಕ ಹಿನ್ನೆಲೆ ಇದೆ. ಭಾಷೆಯನ್ನು ಉಳಿಸಿ ಬೆಳೆಸುವ ಮೂಲಕ ಮುಂದಿನ ಪೀಳಿಗೆಗೆ ಮುಡಿ ಪಾಗಿಡಬೇಕು. ಬಹುತೇಕರು ಅನ್ಯ ಭಾಷೆಗಳಿಗೆ ಮಾರು ಹೋಗುತ್ತಿ ರುವುದು ಅಪಾಯಕಾರಿ ಸಂಗತಿ ಎಂದು ಆತಂಕ ವ್ಯಕ್ತಪಡಿಸಿದರು.

ವ್ಯಾಪಾರ ಹಾಗು ವ್ಯವಹಾರದ ದೃಷ್ಟಿಯಿಂದ ಅನ್ಯ ಭಾಷೆಗಳು ಕೇವಲ ಬಳಕೆಯಲ್ಲಿರಲಿ. ಮಾತೃ ಭಾಷೆ ಕನ್ನಡ ಸದಾಕಾಲ ನಮ್ಮೆಲ್ಲರ ನಾಲಿಗೆಯ ಮೇಲೆ ನಲಿದಾಡುತ್ತಿರಲಿ. ನಮ್ಮ ಭಾಷೆಯನ್ನು ಮರೆತರೆ ಹೆತ್ತ ತಾಯಿಗೆ ದ್ರೋಹ ಮಾಡಿದಂತಾ ಗುತ್ತದೆಂದರು.

ಬೆಂಗಳೂರು, ಮಂಗಳೂರು, ಮೈಸೂರು ಸೇರಿ ಉತ್ತರ ಕರ್ನಾಟಕದ ಬಹುತೇಕ ಪಟ್ಟಣ ನಗರಗಳಲ್ಲಿ ಯುವ ಸಮುದಾಯವು ಅನ್ಯ ಭಾಷೆಗಳ ಬಳಕೆ ಯಲ್ಲಿ ಮುಳುಗಿರುವುದು ಅಪಾಯಕಾರಿ ಬೆಳವಣಿಗೆ ಎಂದರು. ದಂಡಿಗನಹಳ್ಳಿ ಹೋಬಳಿ ಘಟಕ ದಿಂದ ಉದಯಪುರ ಸರ್ಕಾರಿ ಆಸ್ಪತ್ರೆಯ ಆವರಣ ದಲ್ಲಿ 60 ಗಿಡಗಳನ್ನು ನೆಟ್ಟು ನೀರುಣಿಸಲಾಯಿತು. ಬಳಿಕ ಅನ್ನದಾನ ನೆರವೇರಿಸಲಾಯಿತು .

ಕಾರ್ಮಿಕ ಘಟಕದ ಅಧ್ಯಕ್ಷ ಗಣೇಶ್‌ಗೌಡ, ಜಿಲ್ಲಾ ಉಪಾಧ್ಯಕ್ಷ ಸತೀಶ್ ಕರಡೆವು, ಪ್ರಚಾರ ಸಮಿತಿ ಜಿಲ್ಲಾಧ್ಯಕ್ಷ ಬಿ.ಪಿ.ಧರ್ಮರಾಜ್, ಯುವ ಘಟಕ ತಾಲ್ಲೂಕು ಅಧ್ಯಕ್ಷ ಹರೀಶ್, ಮಹಿಳಾ ಘಟಕದ ಅಧ್ಯಕ್ಷೆ ದ್ರಾಕ್ಷಾಯಿಣಿ ಮತ್ತಿತರರಿದ್ದರು.

## ವಿದ್ಯುತ್ ತಗುಲಿ ವ್ಯಕ್ತಿ ಸಾವು

• ಪ್ರಜೋದಯ ವರದಿ

**ಹಳೇಬೀಡು:** ಕಬ್ಬಿಣದ ರಾಡ್ ವಾಹನಕ್ಕೆ ತಗುಲಿ ವಿದ್ಯುತ್ ಪ್ರವಹಿಸಿದ ಪರಿಣಾಮಗೂಡ್ಸ್ ವಾಹನ ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಸಮೀಪದ ಮಹಮ್ಮದ್‌ಪುರ ಗ್ರಾಮದಲ್ಲಿ ನಡೆದಿದೆ.

ಹಳೇಬೀಡು ಹೋಬಳಿ ಮಹಮ್ಮದ್‌ಪುರ ಗ್ರಾಮದ ಗಂಗಯ್ಯ ಮೃತರು. ತಮ್ಮ ಅಶೋಕ್ ಲೇಲ್ಯಾಂಡ್ ಗೂಡ್ಸ್ ವಾಹನದಲ್ಲಿ ಕಬ್ಬಿಣದ ರಾಡ್ ತುಂಬಿಕೊಂಡು ಗ್ರಾಮದ ಮಹಮ್ಮದ್ ಖಾಸಿಂ ಅವರ ಮನೆ ಆವರಣದಲ್ಲಿ ವಾಹನ ತಿರುಗಿಸುವಾಗ ರಾಡ್ ಪಕ್ಕದಲ್ಲಿದ್ದ ವಿದ್ಯುತ್ ಕಂಬಕ್ಕೆ ಅಳವಡಿಸಿದ್ದ ತಂತಿಗೆ ತಗುಲಿದೆ. ಪರಿಣಾಮ ವಿದ್ಯುತ್ ಸ್ಪರ್ಶಿಸಿ ಗಂಗಯ್ಯ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಹಳೇಬೀಡು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಆಡಳಿತಾಧಿಕಾರಿಗಳಿಂದ ಪಂಚಾಯಿತಿ ಜವಾಬ್ದಾರಿ ನಿರ್ಲಕ್ಷ್ಯ

» ಮೊದಲನೇ ಪುಟದಿಂದ

ಪ್ರಗತಿ ಪರಿಶೀಲನಾ ಸಭೆಗಳಲ್ಲಿ ಸಚಿವರು ಮತ್ತು ಶಾಸಕರು ಕೇಳುವ ಪ್ರಶ್ನೆಗಳಿಗೆ ಸಮರ್ಪಕ ಮಾಹಿತಿ ಒದಗಿಸುವುದೂ ಅಧಿಕಾರಿಗಳಿಗೆ ಸವಾಲಾಗಿದೆ. ಇದರ ಜೊತೆಗೆ ಜನಗಣತಿ ಸೇರಿ ವಿವಿಧ ವಿಶೇಷ ಕಾರ್ಯಗಳ ಜವಾಬ್ದಾರಿಯೂ ಅವರ ಮೇಲಿದೆ.

**ಸಾರ್ವಜನಿಕರ ಅಸಮಾಧಾನ**

ಗ್ರಾಮ ಪಂಚಾಯಿತಿಗಳಿಗೆ ನೇಮಕಗೊಂಡಿರುವ ಕೆಲ ಆಡಳಿತಾಧಿಕಾರಿಗಳು ಸಕಾಲಕ್ಕೆ ಕಚೇರಿಗೆ ಬರುವುದಿಲ್ಲವೆಂಬ ಆರೋಪಗಳು ಸಾರ್ವಜನಿಕ ವಲಯದಿಂದ ಕೇಳಿಬರುತ್ತಿವೆ. ಕುಡಿಯುವ ನೀರು ಸೇರಿ ವಿವಿಧ ಸಮಸ್ಯೆಗಳ ಬಗ್ಗೆ ಮಾಹಿತಿ ನೀಡಲು ಗ್ರಾಮಸ್ಥರು ಕರೆ ಮಾಡಿದಾಗ, ಹಲವು ಪಂಚಾಯಿತಿಗಳ ಜವಾಬ್ದಾರಿ ಇರುವ ಕಾರಣ ಸಮಯ ನೀಡಲು ಸಾಧ್ಯವಾಗುತ್ತಿಲ್ಲ ಎಂಬ ಉತ್ತರ ಸಿಗುತ್ತಿದೆಂದು ಸಾರ್ವಜನಿಕರು ದೂರಿದ್ದಾರೆ.

ಒಬ್ಬ ಅಧಿಕಾರಿಗೆ ಎರಡು ಅಥವಾ ಮೂರು ಪಂಚಾಯಿತಿಗಳ ಜವಾಬ್ದಾರಿ ನೀಡಿರುವುದರಿಂದ ಯಾವುದೇ ಪಂಚಾಯಿತಿಗೆ ಪೂರ್ಣ ಸಮಯ ನೀಡಲು ಸಾಧ್ಯವಾಗುತ್ತಿಲ್ಲ. ಇದರಿಂದ ಸಾರ್ವಜನಿಕ ಸೇವೆಗಳ ವಿತರಣೆಯಲ್ಲಿ ವಿಳಂಬ ಉಂಟಾಗುತ್ತಿದೆ ಎಂಬ ಅಭಿಪ್ರಾಯ ಗ್ರಾಮಸ್ಥರಿಂದ ವ್ಯಕ್ತವಾಗುತ್ತಿದೆ.

**ಆಡಳಿತದ ಮೇಲೆ ಪರಿಣಾಮ**

ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳ ಕೊರತೆ ಸ್ಥಳೀಯ ಆಡಳಿತ ವ್ಯವಸ್ಥೆಗೆ ಹೊಡೆತ ನೀಡಿದೆ. ಜನಪ್ರತಿನಿಧಿಗಳು ಇದ್ದರೆ ಗ್ರಾಮ ಮಟ್ಟದ ಸಮಸ್ಯೆಗಳು ತ್ವರಿತವಾಗಿ ಪರಿಹಾರವಾಗುತ್ತವೆ. ಆದರೆ, ಪ್ರಸ್ತುತ ಅಧಿಕಾರಿಗಳೇ ಆಡಳಿತ ನಡೆಸುತ್ತಿರುವ ಕಾರಣ ಜನರು ತಮ್ಮ ಸಮಸ್ಯೆಗಳಿಗಾಗಿ ಕಚೇರಿಗಳ ಸುತ್ತಲೇ ಅಲೆದಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

**ಪಿಡಿಒ ಸಮಯ ನಿಗದಿಗೆ ಸೂಚನೆ**

ಗ್ರಾಮ ಪಂಚಾಯಿತಿಗಳಲ್ಲಿ ಸಾರ್ವಜನಿಕರ ಸಮಸ್ಯೆಯನ್ನು ಆಲಿಸುವವರೇ ಇಲ್ಲವಾಗಿರುವುದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದೆ. ಈ ಹಿನ್ನಲೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸಾರ್ವಜನಿಕರ ಭೇಟಿಗಾಗಿ ಪ್ರತಿದಿನ ಸಮಯವನ್ನು ನಿಗದಿಪಡಿಸಿ, ಆ ಸಮಯದಲ್ಲಿ ಗ್ರಾಮ ಪಂಚಾಯತಿ ಕಚೇರಿಯಲ್ಲಿದ್ದು, ಸಾರ್ವಜನಿಕರ ಮನವಿಗಳಿಗೆ ಸ್ಪಂದಿಸುವ ಕುರಿತು ಸೂಚನೆ ನೀಡಲಾಗಿದೆ.

ಪ್ರತಿ ವಾರ ಸೋಮವಾರದಿಂದ ಶನಿವಾರದವರೆಗೆ ತಮ್ಮ ಪ್ರತಿದಿನದ ಪ್ರವಾಸ ಕಾರ್ಯಕ್ರಮದ ಕ್ಷೇತ್ರ ಭೇಟಿ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳಲ್ಲಿನ ಸಭೆಯಲ್ಲಿ ಭಾಗವಹಿಸುವಿಕೆ ತರಬೇತಿಗಳಲ್ಲಿ ಭಾಗವಹಿಸುವಿಕೆ ಹಾಗು ಕಚೇರಿಯಲ್ಲಿ ಲಭ್ಯವಿರುವ ಮಾಹಿತಿಯನ್ನು ಕಡ್ಡಾಯವಾಗಿ ಗ್ರಾಮ ಪಂಚಾಯಿತಿ ಕಾರ್ಯಾಲಯದ ನೋಟೀಸ್ ಬೋರ್ಡ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.

## 50 ಗ್ರಾಂ ತೂಕದ ಚಿನ್ನಾಭರಣ ಕಳವು

• ಪ್ರಜೋದಯ ವರದಿ

**ಹಾಸನ:** ಹಾಡಹಗಲೇ ಮನೆ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು 50 ಗ್ರಾಂ ತೂಕದ ಚಿನ್ನಾಭರಣ, 80 ಗ್ರಾಂ ಬೆಳ್ಳಿ ಆಭರಣ ಹಾಗು 20 ಸಾವಿರ ರೂ. ನಗದು ಕದ್ದಿರುವ ಘಟನೆ ಗುಂಡೇಗೌಡನಕೊಪ್ಪಲಿನಲ್ಲಿ ಬುಧವಾರ ನಡೆದಿದೆ.

ಚಿತ್ರಲೇಖ ಎಂಬುವವರ ಮನೆಯಲ್ಲಿ ಕಳ್ಳತನವಾಗಿದೆ. ಬೆಳಿಗ್ಗೆ 11.20 ರಿಂದ ಸಂಜೆ 4ರ ಅವಧಿಯಲ್ಲಿ ಮನೆಯಲ್ಲಿ ಯಾರೂ ಇಲ್ಲದಿರುವುದು ಖಚಿತಪಡಿಸಿಕೊಂಡು ನುಗ್ಗಿರುವ ಕಳ್ಳರು ಬಲವಾದ ಆಯುಧದಿಂದ ಬಾಗಿಲ ಬೀಗ ಮುರಿದು ಪ್ರವೇಶಿಸಿದ್ದಾರೆ.

ಬೀರುವಿನಲ್ಲಿಟ್ಟಿದ್ದ 10 ಗ್ರಾಂ ತೂಕದ ಚಿನ್ನದ ಮಣಿ ಚೈನ್, 5 ಗ್ರಾಂ ಚಿನ್ನದ ಮಣಿ ಚೈನ್, 20 ಗ್ರಾಂ ಕ್ರಿಸ್ಟಲ್ ಮಣಿ ಚೈನ್, 5 ಗ್ರಾಂ ಚಿನ್ನದ ಓಲೆ, 3 ಗ್ರಾಂ ತೂಕದ ಚಿನ್ನ ಉಂಗುರ, 3 ಗ್ರಾಂ ತೂಕದ ಸಣ್ಣ ಒಡವೆ, 3 ಗ್ರಾಂನ ಚಿನ್ನದ ಓಲೆ, 50 ಗ್ರಾಂ ತೂಕದ ಬೆಳ್ಳಿ ಕಾಲು ಚೈನ್, 30 ಗ್ರಾಂ ತೂಕದ ಬೆಳ್ಳಿ ನೆಕ್ ಚೈನ್ ಕಳವು ಮಾಡಲಾಗಿದೆ. ಬಡಾವಣೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ವಾಹನ ವಶ



• ಪ್ರಜೋದಯ ವರದಿ

**ಸಕಲೇಶಪುರ:** ಅಕ್ರಮವಾಗಿ ಮರದ ದಿಮ್ಮಿಗಳನ್ನು ಸಾಗಿಸುತ್ತಿದ್ದ ವಾಹನವನ್ನು ಅರಣ್ಯ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡಿದ್ದಾರೆ.

ವಲಯ ಅರಣ್ಯಾಧಿಕಾರಿ ಹೇಮಂತ್‌ಕುಮಾರ್ ಅವರ ಮಾರ್ಗದರ್ಶನದಲ್ಲಿ ಉಪವಲಯ ಅರಣ್ಯಾಧಿಕಾರಿಗಳಾದ ಅರ್ಜುನ್, ಮಂಜುನಾಥ್, ಕುಮಾರ್ ಹಾಗು ಉಮೇಶ್ ನೇತೃತ್ವದ ತಂಡ ತಾಲ್ಲೂಕಿನ ಬೈಕೆರೆ ಗ್ರಾಮ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿತು.

ಈ ವೇಳೆ ಕಂಟೇನರ್ ಮಾದರಿಯ ವಾಹನದಲ್ಲಿ ಪರವಾನಗಿ ಪಡೆಯದೆ ಮರದ ದಿಮ್ಮಿಗಳನ್ನು ಸಾಗಿಸುತ್ತಿರುವುದು ಪತ್ತೆಯಾಯಿತು. ವಾಹನ ಹಾಗು ಮರದ ದಿಮ್ಮಿಗಳನ್ನು ವಶಪಡಿಸಿ ಕೊಂಡು ಕಾನೂನು ಕ್ರಮ ಕೈಗೊಳ್ಳಲಾಗಿದೆ. ಅರಣ್ಯ ಸಂಪತ್ತಿನ ಅಕ್ರಮ ಸಾಗಾಟ ಮತ್ತು ಕಳ್ಳತನ ತಡೆಗೆ ಇಲಾಖೆ ನಿರಂತರವಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದ್ದು, ಕಾನೂನು ಉಲ್ಲಂಘಿಸುವವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಮುಂದುವರಿಯಲಿದೆ ಎಂದು ಆರ್‌ಎಫ್‌ಒ ಹೇಮಂತ್ ಕುಮಾರ್ ತಿಳಿಸಿದ್ದಾರೆ.

### ಅಗಿಲೆ ಗ್ರಾಮಸ್ಥರಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಮೌನ ಪ್ರತಿಭಟನೆ

## ದೇವಸ್ಥಾನದ ಭೂಮಿ ಒತ್ತುವರಿ ತೆರವಿಗೆ ಆಗ್ರಹ

• ಪ್ರಜೋದಯ ವರದಿ



**ಹಾಸನ:** ತಾಲ್ಲೂಕಿನ ಅಗಿಲೆ ಗ್ರಾಮದಲ್ಲಿ ಸರ್ಕಾರಿ ಜಾಗ-ಪುರಾತನ ದೇವಸ್ಥಾನದ ಭೂಮಿ ಒತ್ತುವರಿ ಮಾಡಿರುವವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ಗ್ರಾಮಸ್ಥರು ಬುಧವಾರ ಜಿಲ್ಲಾಧಿಕಾರಿ ಕಚೇರಿ ಎದುರು ಮೌನ ಪ್ರತಿಭಟನೆ ನಡೆಸಿದರು.

ಗ್ರಾಮದಲ್ಲಿ ಮುಖ್ಯ ರಸ್ತೆ ಜಾಗ, ಕುಂತಿ ಬೆಟ್ಟದ ಸರ್ಕಾರಿ ಜಮೀನು ಮತ್ತು ಪಿಂಚಿನ ಕಟ್ಟೆ ಕೆರೆ ಜಾಗವನ್ನು ಗ್ರಾಮದ ನಾಗರಾಜ್ ಎಂಬುವರು ಒತ್ತುವರಿ ಮಾಡಿದ್ದಾರೆ. ಗ್ರಾಮದ ಸರ್ವೆ ನಂ.171 ರಲ್ಲಿ ದರಕಾಸ್ತು ಮೂಲಕ ಮಂಜೂರಾದ 3 ಎಕರೆ ಜಮೀನು ಈಗ ಸರ್ವೆ ನಂ. 235 ಆಗಿ ನಾಗರಾಜ್ ಎಂಬುವರ ಹೆಸರಿಗೆ ವರ್ಗಾವಣೆಯಾಗಿದೆ. ಅದೇ ವ್ಯಕ್ತಿಗೆ ಸರ್ವೆ ನಂ. 171 ರಲ್ಲಿ 1 ಎಕರೆ 35 ಗುಂಟೆ ಜಮೀನು ಮಂಜೂರಾಗಿದೆ. ಆದರೆ, ನಾಗರಾಜ್ ತಮ್ಮ ಜಮೀನಿಗೆ ತಂತಿ ಬೇಲಿ ಹಾಕಲು ಯಾವುದೇ ಸರ್ವೆ ಮಾಡದೆ, ಕುಂತಿ ಬೆಟ್ಟದ ಸರ್ಕಾರಿ ಜಮೀನಿನಲ್ಲಿರುವ ಕಲ್ಲು ಬಂಡೆಗಳನ್ನು ಹಿಟಾಚಿ ಬಳಸಿ ಒತ್ತುವರಿ ಮಾಡಿದ್ದಾರೆ ಎಂದು ದೂರಿದರು.

ಪುರಾತನ ದೇವಸ್ಥಾನ, ಜಾತ್ರೆ ನಡೆಯುವ ಸ್ಥಳ, ಒತ್ತುವರಿಯಾದ ಜಾಗದಲ್ಲಿದೆ. ವರ್ಷಕ್ಕೊಮ್ಮೆ ಏಳು ಊರಿನ ಜನ ಸೇರಿ ಕುಂತಿಬೆಟ್ಟ ಲಕ್ಷ್ಮೀದೇವಿ ಜಾತ್ರಾ ಮಹೋತ್ಸವವನ್ನು ಇಲ್ಲೇ ಅದ್ಧೂರಿಯಾಗಿ ಆಚರಿಸಿಕೊಂಡು ಬರುತ್ತಿದ್ದಾರೆ. ಈ ಐತಿಹಾಸಿಕ-ಧಾರ್ಮಿಕ ಪ್ರಾಮುಖ್ಯತೆ ಇರುವ ಸ್ಥಳ ಒತ್ತುವರಿಯಿಂದ ಜಾತ್ರೆಗೆ ಅಡ್ಡಿ ಮತ್ತು ಗ್ರಾಮಸ್ಥರ ನಂಬಿಕೆಗೆ ಧಕ್ಕೆ ಬರಲಿದೆ. ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಸರ್ಕಾರಿ ಜಾಗ ಮತ್ತು ದೇವಸ್ಥಾನದ ಭೂಮಿಯನ್ನು ಒತ್ತುವರಿಯಿಂದ ಮುಕ್ತಗೊಳಿಸಬೇಕೆಂದು ಮನವಿ ಮಾಡಿದರು.

ಅಗಿಲೆ-ದೊಡ್ಡಬಾಗನಹಳ್ಳಿಯ 60 ಅಡಿ ಮುಖ್ಯ ರಸ್ತೆ, ಕೆರೆ ಜಾಗವನ್ನೂ ಒತ್ತುವರಿ ಮಾಡಿದ್ದು, ಜಿಲ್ಲಾ ಪಂಚಾಯಿತಿ ಅನುದಾನ ಹಾಗು ಉದ್ಯೋಗ ಖಾತ್ರಿ ಯೋಜನೆಯಡಿ ಹಲವು ಬಾರಿ ಜಲ್ಲಿ ರಸ್ತೆ ನಿರ್ಮಿಸಲಾಗಿದೆ.

ಆದರೀಗ ಜೆಸಿಬಿ ಮೂಲಕ ರಸ್ತೆ ಮುಚ್ಚಿಸಿ ಒತ್ತುವರಿ ಮಾಡಿದ್ದಾರೆ. ಕೆರೆಯನ್ನೂ ಕಬಳಿಸಿದ್ದು, ರೈತರು ಮತ್ತು ಸಾರ್ವಜನಿಕರ ಓಡಾಟಕ್ಕೆ ಇದ್ದ ಏಕೈಕ ಮುಖ್ಯ ರಸ್ತೆಗೆ ಅಡ್ಡಿಯಾಗಿದೆ. ಈ ಜಾಗವನ್ನು ಬಿಡಿಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅಗಿಲೆ ನವೀನ್ ಕುಮಾರ್, ಗ್ರಾಮಸ್ಥರಾದ ಚನ್ನೇಗೌಡ, ರಾಮೇಗೌಡ, ಶಾಂತಮ್ಮ, ಲಕ್ಷ್ಮೇಗೌಡ ಇದ್ದರು.

## ನಾಳೆ ಹನುಮಾನ್ ಚಾಲೀಸಾ ಪಠಣ

• ಪ್ರಜೋದಯ ವರದಿ




**ಹಾಸನ:** ಅಧಿಕ ಜೇಷ್ಠ ಮಾಸದ ಅಂಗವಾಗಿ ನಗರದ ರೈಲ್ವೆ ನಿಲ್ದಾಣ ಎದುರಿನ ಶ್ರೀ ಆಂಜನೇಯ ಸ್ವಾಮಿ ದೇವಾಲಯದಲ್ಲಿ 1 ಸಾವಿರ ಭಕ್ತರಿಂದ ಜೂ.13 ರಂದು ಸಾಮೂಹಿಕ ಹನುಮಾನ್ ಚಾಲೀಸಾ ಪಠಣ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ದೇವಾಲಯದ ಪ್ರಧಾನ ಅರ್ಚಕ ರಕ್ಷಿತ್ ಭಾರದ್ವಾಜ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, ಶನಿವಾರ ಸಂಜೆ 5.30ಕ್ಕೆ ಧಾರ್ಮಿಕ ಕಾರ್ಯಕ್ರಮ ನಡೆಯಲಿದೆ. ಸಮಾಜದಲ್ಲಿ ಸಂಸ್ಕಾರ, ಸಾಂಸ್ಕೃತಿಕ ಮೌಲ್ಯಗಳ ಅರಿವು ಮೂಡಿ ಸುವ ಉದ್ದೇಶದಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಬೆಂಗಳೂರಿನ ಆಧ್ಯಾತ್ಮಿಕ ಚಿಂತಕ ಜಗನ್ನಾಥ ಶಾಸ್ತ್ರಿ ಪ್ರವಚನ ನೀಡಲಿದ್ದಾರೆ. ಸುಂದರಕಾಂಡ ಪಾರಾಯಣ, ರಾಮತಾರಕ ಹೋಮ ಹಾಗು ಪೂರ್ಣಾಹುತಿ ಬಳಿಕ ಹನುಮಾನ್ ಚಾಲೀಸಾ ಪಠಣ ಜರುಗಲಿದೆ. ಭಕ್ತರಿಗೆ ಉಚಿತ ಪ್ರವೇಶವಿದ್ದು ಯಾರು ಬೇಕಾದರೂ ಭಾಗವಹಿಸಬಹುದು. ಮಂತ್ರ ಗೊತ್ತಿಲ್ಲದವರು ಪಾಲ್ಗೊಳ್ಳಬಹುದು. ದೇವಸ್ಥಾನದಲ್ಲಿ ಪ್ರವೇಶ ಚೀಟಿಗಳನ್ನು ನೀಡುತ್ತಿದ್ದು ಶುಕ್ರವಾರ ಸಂಜೆ ವರೆಗೆ ಪಡೆಯಬಹುದು. ಈಗಾಗಲೇ 800ಕ್ಕೂ ಹೆಚ್ಚು ಜನರು ನೋಂದಣಿ ಮಾಡಿಕೊಂಡಿದ್ದಾರೆ. ಮಾಹಿತಿಗೆ ಮೊ.ಸಂ. 8088677813 ಇಲ್ಲಿಗೆ ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಚಂದ್ರಶೇಖರ್, ದೀಪಕ್, ಸರ್ವಮಂಗಳ ಇದ್ದರು.

ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK